ನಿಮ್ಮ ನಂಬಿಕೆಯ ಧ್ವನಿ
# ಧೈರ್ಯದ ದಾರಿ
DAIRYADA DAARI NEWS PAPER
EMAIL : dairyadadaari@gmail.com ಸಂಪುಟ: 01 ಸಂಚಿಕೆ: 183
ಬೆಲೆ ರೂ : 2.00
ರಾಯಚೂರು
ಪುಟ: 4
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795
ಭಾನುವಾರ: 28–06–2026

## ಅಡ್ಡಮತದಾನ: ಸತ್ಯಶೋಧನಾ ಸಮಿತಿ ವರದಿ ಸಲ್ಲಿಕೆ

**ಬೆಂಗಳೂರು, ಜೂ. 27–** ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ನೇತೃತ್ವದ ಸತ್ಯಶೋಧನಾ ಸಮಿತಿ ಇಂದು ತನ್ನ ವರದಿಯನ್ನು ಸಲ್ಲಿಸಿದೆ.

ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರನ್ನು ಪತ್ತೆಹಚ್ಚಲು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ನೇತೃತ್ವದಲ್ಲಿ ಶಾಸಕರಾದ ಮಹೇಶ್ ಟೆಂಗಿನಕಾಯಿ ಹಾಗೂ ಮಾಜಿ ಸಚಿವ ಎನ್. ಮಹೇಶ್ ರವರನ್ನೊಳಗೊಂಡಂತೆ ಮೂವರ ಸತ್ಯಶೋಧನಾ ಸಮಿತಿಯನ್ನು ರಚಿಸಿದ್ದರು.

ಈ ಸತ್ಯಶೋಧನಾ ಸಮಿತಿ ಇಂದು ತನ್ನ ವರದಿಯನ್ನು ಬಿಜೆಪಿ ರಾಜ್ಯಾಧ್ಯಕ್ಷರಿಗೆ ಸಲ್ಲಿಸಿದೆ.

ಮುಚ್ಚಿದ ಲಕೋಟೆಯಲ್ಲಿ ಮೂರು ಪುಟಗಳ ವರದಿಯನ್ನು ಸಲ್ಲಿಸಲಾಗಿದ್ದು, ಮೈತ್ರಿ ಪಕ್ಷದಿಂದ ಒಟ್ಟು 12 ಶಾಸಕರು ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ ಮಾಡಿದ್ದು, ಇದರಲ್ಲಿ ಬಿಜೆಪಿಯಿಂದ 4 ಅಡ್ಡಮತದಾನವಾಗಿದೆ. ಅದರಲ್ಲಿ ಒಂದು ಮತ ಅಸಿಂಧುವಾಗಿದೆ ಎಂದು ಉಲ್ಲೇಖಿಸಲಾಗಿದೆ. ಉಳಿದ 8 ಮತಗಳು ಜೆಡಿಎಸ್‌ನಿಂದ ಅಡ್ಡಮತದಾನವಾಗಿದೆ ಎಂದು ಹೇಳಲಾಗಿದೆ.

ವರದಿಯಲ್ಲಿ ಅಡ್ಡಮತದಾನ ಮಾಡಿದ ಶಾಸಕರುಗಳ ಹೆಸರುಗಳನ್ನು ಉಲ್ಲೇಖಿಸಿಲ್ಲ ಎಂದು ಹೇಳಲಾಗಿದ್ದು, ಅನುಮಾನ ಇರುವ ಶಾಸಕರ ಮೇಲೆ ನಿಗಾ ಇಡುವಂತೆ ಸಮಿತಿ ವರದಿಯಲ್ಲಿ ಹೇಳಿದೆ.

ಈ ವರದಿಯನ್ನು ಪಕ್ಷದ ವರಿಷ್ಠರಿಗೆ ಕಳುಹಿಸಲಾಗುತ್ತದೆ. ಈ ವರದಿಯಲ್ಲಿ ಯಾವೆಲ್ಲಾ ಶಾಸಕರು ಅಡ್ಡಮತದಾನ ಮಾಡಿದ್ದಾರೆ



ಎಂಬ ವಿವರಗಳನ್ನು ಉಲ್ಲೇಖಿಸಲಾಗಿದ್ದು, ಈ ವರದಿಯನ್ನು ಪಕ್ಷದ ವರಿಷ್ಠರಿಗೆ ಕಳುಹಿಸಲಾಗುತ್ತದೆ.

ವರದಿಯಲ್ಲಿ ಯಾವ ಶಾಸಕರುಗಳ ಹೆಸರಿದೆ ಎಂಬ ಮಾಹಿತಿಯನ್ನು ಗೌಪ್ಯವಾಗಿ ಇಡಲಾಗಿದ್ದು, ಈ ವರದಿ ವರಿಷ್ಠರ ಕೈ ಸೇರಿದ ನಂತರವೇ ಶಾಸಕರುಗಳ ಹೆಸರುಗಳು ಗೊತ್ತಾಗಲಿದೆ.

ಕಳೆದ ಮಂಗಳವಾರ ಬಿಜೆಪಿ ರಾಷ್ಟ್ರೀಯ ನಿತಿನ್ ನಬಿನ್ ರವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಪ್ರತಿಪಕ್ಷ ನಾಯಕ ಆರ್. ಅಶೋಕ್ ಭೇಟಿಯಾಗಿ ಅಡ್ಡಮತದಾನಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಿ ಅಡ್ಡಮತದಾನ ಮಾಡಿರುವ ಶಾಸಕರ ವಿರುದ್ಧ ಕಠಿಣ ಕ್ರಮಕ್ಕೆ ಮನವಿ ಮಾಡಿದ್ದರು.

ಈ ಸಂದರ್ಭದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು ಅಡ್ಡಮತದಾನ ಮಾಡಲು ಅವಕಾಶ ಮಾಡಿಕೊಟ್ಟ ರಾಜ್ಯ ನಾಯಕರ ಬಗ್ಗೆ ಅಸಮಾಧಾನ ಹೊರ ಹಾಕಿ, ಅಡ್ಡಮತದಾನ ಮಾಡಿದ ಶಾಸಕರ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು.

ಸತ್ಯಶೋಧನಾ ಸಮಿತಿಯ ವರದಿ ಬಂದ ನಂತರ ಶಾಸಕರ ವಿರುದ್ಧ ಕ್ರಮ ಆಗಲಿದೆ ಎಂದು ಹೇಳಲಾಗಿದ್ದು, ಈಗ ವರದಿ ಸಲ್ಲಿಕೆಯಾಗಿದೆ.

ಈ ವರದಿಯನ್ನು ಆಧರಿಸಿ ಪಕ್ಷದ ಹೈಕಮಾಂಡ್ ಅಡ್ಡಮತದಾನ ಮಾಡಿದ ಶಾಸಕರ ವಿರುದ್ಧ ಕ್ರಮ ಕೈಗೊಳ್ಳಲಿದೆ.

ಸಿ.ಟಿ.ರವಿ ಹೇಳಿಕೆ–ಬಿಜೆಪಿ ರಾಜ್ಯಾಧ್ಯಕ್ಷರಿಗೆ ಅಡ್ಡಮತದಾನಕ್ಕೆ ಸಂಬಂಧಿಸಿದಂತೆ ವರದಿ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಿ.ಟಿ. ರವಿ ಅವರು, ಅನುಮಾನಾಸ್ಪದವಾಗಿ ಕಂಡು ಬಂದವರ ಪಟ್ಟಿ ಮಾಡಿ ಅವರ ಅಭಿಪ್ರಾಯ ಸಂಗ್ರಹಿಸಿ ಅಭ್ಯರ್ಥಿಗಳ ಜತೆ ಚರ್ಚಿಸಿ ಸಾಂದರ್ಭಿಕ ಸಾಕ್ಷ್ಯ ಪರಿಗಣಿಸಿ ವರದಿ ತಯಾರಿಸಿ ಕೊಟ್ಟಿದ್ದೇವೆ. ಇದು ಆಂತರಿಕ ತನಿಖಾ ವರದಿ. ಹಾಗಾಗಿ ಹೆಚ್ಚಿನ ಮಾಹಿತಿ ಕೊಡಲು ಆಗಲ್ಲ ಎಂದರು.

ಬಿಜೆಪಿ–ಜೆಡಿಎಸ್‌ನಿಂದ ಒಟ್ಟು 12 ಮತಗಳು ಅಡ್ಡಮತಗಳಾಗಿವೆ. ಬಿಜೆಪಿಯಿಂದ 4 ಅಡ್ಡಮತದಾನವಾಗಿದ್ದು, ಅದರಲ್ಲಿ ಒಂದು ಮತ ಅಸಿಂಧು ಆಗಿದೆ ಎಂದರು.

ಸಮಿತಿ ವರದಿ ಕೊಟ್ಟಿದೆ. ಉಳಿದಿದ್ದನ್ನು ಅಧ್ಯಕ್ಷರು ತೀರ್ಮಾನ ಮಾಡುತ್ತಾರೆ. ವರದಿಯನ್ನು ರಾಜ್ಯಾಧ್ಯಕ್ಷರು ಹೈಕಮಾಂಡ್‌ಗೆ ಸಲ್ಲಿಕೆ ಮಾಡಬಹುದು ಎಂದು ಸಿ.ಟಿ. ರವಿ ಹೇಳಿದರು.

ಅಡ್ಡಮತದಾನವಾಗಿರುವುದು ಪ್ರಜಾಪ್ರಭುತ್ವ ವಿರೋಧಿ ನಡೆ. ಬೇರೆ ಪಕ್ಷದ ಅಡ್ಡಮತದಾನದ ಬಗ್ಗೆ ಕಾಂಗ್ರೆಸ್ ಪಕ್ಷಕ್ಕೆ ಪ್ರಶ್ನಿಸುವ ನೈತಿಕ ಹಕ್ಕಿಲ್ಲ ಎಂದು ಅವರು ಹೇಳಿದರು.

## ನಾಡಪ್ರಭು ಕೆಂಪೆಗೌಡರ 517 ನೇ ಜಯಂತಿ ಕಾರ್ಯಕ್ರಮ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತದಿಂದ ನಾಡಪ್ರಭು ಕೆಂಪೆಗೌಡರ 517 ನೇ ಜಯಂತಿ ಕಾರ್ಯಕ್ರಮ ಅಂಗವಾಗಿ ನಾಡಪ್ರಭು ಕೆಂಪೆಗೌಡರ ಭಾವಚಿತ್ರಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರೀಷತ್ ಗೌರವ ಕಾರ್ಯದರ್ಶಿ ತಾಯಪ್ಪ ಬಿ.ಹೊಸೂರು ಪುಷ್ಪ ಸಮರ್ಪಿಸಿ ಮಾತನಾಡಿ 16 ನೇ ಶತಮಾನದಲ್ಲಿ ನಾಡಪ್ರಭು ಕೆಂಪೆಗೌಡರು ರಾಜ್ಯದ ರಾಜಧಾನಿ ಬೆಂಗಳೂರು ನಗರವನ್ನು ಸ್ಥಾಪನೆ ಮಾಡಿ ಬೆಂಗಳೂರು ನಗರದ ಸಂಪೂರ್ಣವಾದ ಅಭಿವೃದ್ದಿಗೆ ಶ್ರಮಿಸಿದ್ದಾರೆ ಅವರ ಗೌರವಾರ್ಥ ಪ್ರತಿ ವರ್ಷ ನಾಡಪ್ರಭು ಕೆಂಪೆಗೌಡರ ಜಯಂತಿಯನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ನಿವೃತ್ತ ಉಪತಹಶೀಲ್ದಾರ್ ವಿನಾಯಕರಾವ್ , ಕಂದಾಯ ಇಲಾಖೆಯ ಸಿಬ್ಬಂದಿಗಳಾದ ಗೌಸ್ ಪಾಷ, ಜಾವೇದ್‌ಇದ್ದರು.

## ಬೆಂಗಳೂರು ನಿರ್ಮಾಣ ಮಾಡುವಲ್ಲಿ ಕೆಂಪೇಗೌಡರ ಸೇವೆ ಅನನ್ಯ ಡಾ. ಬಿರಾದಾರ



ಧೈರ್ಯದ ದಾರಿ

ಕೆಂಪನಂಜೆ ಗೌಡ ಮತ್ತು ಲಿಂಗಾಂಬಬೆಯ ಮಗನಾಗಿ ಜನಿಸಿದ ಕೆಂಪೇಗೌಡರು ಬಾಲ್ಯದಲ್ಲಿ ಗುರುಗಳ ಮತ್ತು ತಂದೆ ಮಾರ್ಗದರ್ಶನದಲ್ಲಿ ಯುದ್ಧದ ಎಲ್ಲಾ ಕಲೆಗಳನ್ನ ಕರಗತ ಮಾಡಿಕೊಂಡು. ನಂತರ ತಂದೆಯ ಆಡಳಿತವನ್ನು 1530ರಲ್ಲಿ ಜವಾಬ್ದಾರಿಯನ್ನು ತೆಗೆದುಕೊಂಡು ವಿಜಯನಗರ ದೊರೆಗಳ ಸಹಕಾರ ಮಾರ್ಗದರ್ಶನದಲ್ಲಿ ಯಲಹಂಕ ಭಾಗದಲ್ಲಿ ಬೆಂಗಳೂರು ನಿರ್ಮಾಣ ಮಾಡುವುದರಲ್ಲಿ ನಿರಂತರವಾಗಿ ಕೆಲಸವನ್ನು ಮಾಡಿ ಬೆಂಗಳೂರಿನ ನಿರ್ಮಾಣ ಮಾಡುವಲಿ ಅವರ ಸೇವೆ ಪ್ರಾರಂಭ ಮಾಡಿದರು .ಪೂರ್ವಕ್ಕೆ ಪಶ್ಚಿಮಕ್ಕೆ ದಕ್ಷಿಣಕ್ಕೆ ಉತ್ತರಕ್ಕೆ ನಾಲ್ಕು ಹೆಬ್ಬಾಗಿಲನ್ನು ನಿರ್ಮಾಣ ಮಾಡಿ ನಂತರ ಐದು ಕಿರಿಯ ದ್ವಾರಗಳನ್ನು ನಿರ್ಮಾಣ ಮಾಡಿದರು .ಅವರು ಗ್ರಾಮೀಣ ಮತ್ತು ಬೆಂಗಳೂರಿನ ಜನರ ನೀರಿಗಾಗಿ ಮತ್ತು ವ್ಯವಸಾಯಕ್ಕಾಗಿ ಹಲವಾರು ಕೆರೆಗಳನ್ನು ನಿರ್ಮಾಣ ಮಾಡಿದರು ಕೆರೆಗಳು ವಿಶೇಷವಾಗಿ ಹಲಸೂರು ಕೆರೆ ಕಾರಂಜಿ ಕೆರೆ. ಸಂಪಂಗಿ .ರಾಮಕೆರೆ ಹೀಗೆ ಹಲವಾರು ಕೆರೆಗಳನ್ನ ನಿರ್ಮಾಣ ಮಾಡಿ ಜನರಿಗೆ ಅನುಕೂಲ ಮಾಡಿಕೊಟ್ಟರು ಜೊತೆಗೆ ಕಲ್ಯಾಣಿಗಳನ್ನು ನಿರ್ಮಾಣ ಮಾಡಿ ಜನರಿಗೆ ಸೇವೆಯನ್ನು ಮಾಡಿದರು. ಜೊತೆಗೆ ಸಾರ್ವಜನಿಕರಿಯಾಗಿ ರಸ್ತೆಗಳನ್ನು ಪಕ್ಕದಲ್ಲಿ ಗಿಡಮರಗಳನ್ನು ನಿರ್ಮಾಣ ಮಾಡಿ ತಮ್ಮ ಸಾಮಾಜಿಕ ಸೇವೆಯನ್ನು ಮಾಡಿದವರು ನಾಡಪ್ರಭು ಕೆಂಪೇಗೌಡರು ಜೊತೆಗೆ ಮಾದರಿಯ ಉದ್ಯಾನವನ ಅರ್ಥಪೂರ್ಣವಾದ ಆಡಳಿತ ವ್ಯವಸ್ಥೆಯನ್ನು ನಿರ್ಮಾಣ ಮಾಡಿ. ಬೆಂಗಳೂರಿನಲ್ಲಿ ಹಲವಾರು ಪೇಟೆಗಳನ್ನ ನಿರ್ಮಾಣ ಮಾಡುವುದರ ಮೂಲಕ ಬೆಂಗಳೂರಿನ ನಿರ್ಮಾಣ ಮಾಡುವಲ್ಲಿ ಇವರ ಸೇವೆ ಅನನ್ಯ ವಾಗಿದೆ ಎಂದು ದಿನಾಂಕ 27/ 6/ 20 26ರಂದು ರಾಯಚೂರು ತಾಲೂಕಿನ ಸರ್ಕಾರಿ ಪ್ರೌಢಶಾಲೆ ಉಡಮಗಲ ಖಾನಾಪುರದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದವನು ಸಸಿಗೆ ನೀರು ಹಾಕುವುದರ ಮೂಲಕ ಉದ್ಘಾಟಿಸಿದ ನಂತರ ಶಾಲೆಯ ಕನ್ನಡ ಕಲಾಸಿಕರು ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರದ ವಿಷಯದ ಡಾಕ್ಟರ್ ದಂಡಪ್ಪ ಬಿರಾದಾರ ಮಾತನಾಡಿದರು. ಶಾಲೆಯ ಮುಖ್ಯ ಗುರುಗಳು ಕಾರ್ಯಕ್ರಮದ ಅಧ್ಯಕ್ಷ ವಹಿಸಿದ ವೀರೇಶ್ ಅಂಗಡಿ ಅವರು ಮಾತನಾಡುತ್ತಾ ಕೆಂಪೇಗೌಡ್ರು ವಿಶೇಷವಾಗಿ ಅವರ ಮಾಡಿದ ಸಾಧನೆಯಿಂದ ಇವತ್ತು ಕೆಂಪೇಗೌಡ ಬಸ್ಸು ನಿಲ್ದಾಣ ಎಂಬ ಹೆಸರನ್ನು ನಾಮಕರಣ ಮಾಡಿದೆ ಜೊತೆಗೆ ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡ ಹೆಸರನ್ನ ಇಡಲಾಗಿದೆ. ಅವರ ಸೊಸೆ ಲಕ್ಷ್ಮೀದೇವಿಯ ತ್ಯಾಗ ಪ್ರತಿಯೊಬ್ಬರು ಸ್ಮರಣೆ ಮಾಡಲೇಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರು.ಮತ್ತು ಸಿಬ್ಬಂದಿಯವರು ಉಪಸ್ಥಿತರಿದ್ದರು ಕುಮಾರಿ ಮೇಘನಾ ಸ್ವಾಗತಿಸಿದಳು ಪಲ್ಲವಿ ಕೊನೆಯಲ್ಲಿ ವಂದಿಸಿದಳು


## ಸಿರವಾರ ಪಟ್ಟಣದ ಮುಖ್ಯ ರಸ್ತೆಯ ಡಿವೈಡರ್‌ಗಳಿಗೆ ಎಲ್‌ಇಡಿ ದೀಪಗಳ ಅಳವಡಿಕೆ: ಪ.ಪಂ. ಅಧ್ಯಕ್ಷರ ಕಾರ್ಯಕ್ಕೆ ಶ್ಲಾಘನೆ

ಧೈರ್ಯದ ದಾರಿ

**ಸಿರವಾರ:** ಪಟ್ಟಣದ ಮುಖ್ಯ ರಸ್ತೆಯ ಡಿವೈಡರ್‌ಗಳಿಗೆ ಹೊಸದಾಗಿ ಎಲ್‌ಇಡಿ ದೀಪಗಳನ್ನು ಅಳವಡಿಸುವ ಮೂಲಕ ಪಟ್ಟಣದ ಸೌಂದರ್ಯವನ್ನು ಹೆಚ್ಚಿಸಲಾಗಿದ್ದು, ರಾತ್ರಿ ವೇಳೆಯಲ್ಲಿ ವಾಹನ ಸವಾರರಿಗೆ ಅನುಕೂಲ ಮಾಡಿಕೊಡಲಾಗಿದೆ. ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದ್ರಿ ಅವರ ನೇತೃತ್ವದಲ್ಲಿ ಕೈಗೊಂಡ ಈ ಅಭಿವೃದ್ಧಿ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.

ರಾತ್ರಿ ವೇಳೆ ಬೆಳಕಿನ ಕೊರತೆಯಿಂದಾಗಿ ಮುಖ್ಯ ರಸ್ತೆಯಲ್ಲಿ ಸಂಚರಿಸಲು ವಾಹನ ಸವಾರರು ತೊಂದರೆ ಅನುಭವಿಸುತ್ತಿದ್ದರು. ಇದನ್ನು ಮನಗಂಡು, ಪಟ್ಟಣ ಪಂಚಾಯತ್ ವತಿಯಿಂದ ಡಿವೈಡರ್‌ಗಳಿಗೆ ಸುಸಜ್ಜಿತ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲಾಗಿದೆ. ಇದರಿಂದ ಪಟ್ಟಣದ ರಸ್ತೆಗಳು ಕಂಗೊಳಿಸುತ್ತಿದ್ದು, ಸಂಚಾರ ಸುರಕ್ಷತೆಗೂ ಹೆಚ್ಚಿನ ಒತ್ತು ಸಿಕ್ಕಂತಾಗಿದೆ.

ಈ ಜನಪರ ಕೆಲಸಕ್ಕಾಗಿ ಅಧ್ಯಕ್ಷ ಹಾಜಿ ಚೌದ್ರಿ ಮತ್ತು ಪಟ್ಟಣ ಪಂಚಾಯತ್ ಆಡಳಿತ ಮಂಡಳಿಯನ್ನು ಸಾರ್ವಜನಿಕರು ಹಾಗೂ ಸಂಘ–ಸಂಸ್ಥೆಯ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.




## ಭಾವೈಕ್ಯತೆಯ ಹಬ್ಬ ಮೊಹರಂ: ಅರಕೇರಾ ಪಟ್ಟಣದಲ್ಲಿ ಸಡಗರದ ತೆರೆ



ಧೈರ್ಯದ ದಾರಿ

**ಅರಕೇರಾ:** ಪಟ್ಟಣವು ಮತ್ತೊಮ್ಮೆ ಭಾವೈಕ್ಯತೆಯ ಅದ್ಭುತ ದೃಶ್ಯಕ್ಕೆ ಸಾಕ್ಷಿಯಾಯಿತು. ಹಿಂದೂ ಮುಸ್ಲಿಂ ಭಾಂದವರ ನಡುವಿನ ಸಾಮರಸ್ಯವನ್ನು ಸಾರುವ ಮೊಹರಂ ಹಬ್ಬವನ್ನು ಇಲ್ಲಿ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಈ ಹಬ್ಬವು ಕೇವಲ ಒಂದು ಧರ್ಮಕ್ಕೆ ಸೀಮಿತವಾಗದೆ ಸಮುದಾಯಗಳ ನಡುವಿನ ಸೌಹಾರ್ದತೆ ಮತ್ತು ಸಹಬಾಳ್ವೆಯ ಪ್ರತಿಕವಾಗಿ,ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮತ್ತಷ್ಟು ಹೆಚ್ಚಿಸಿತು.

ಪಟ್ಟಣದಲ್ಲಿ ಪ್ರಮುಖ ಭೀದಿಗಳಲ್ಲಿ ಅಲಾಯಿ ದೇವರುಗಳ ಭವ್ಯ ಮೇರವಣಿಗೆಯೊಂದಿಗೆ ಈ ಹಬ್ಬವು ಶಾಂತಿಯುತವಾಗಿ ತೆರೆಕಂಡಿತು. ಕರ್ಬಲ್ ಗೆ ಕಳುಹಿಸಿಕೊಡುವ ಮೂಲಕ ಭಕ್ತರು ತಮ್ಮ ಶ್ರದ್ಧಾ ಭಕ್ತಿಯನ್ನು ಸಮರ್ಪಿಸಿದರು. ತಾಲೂಕಿನ ಕೊತ್ತದೊಡ್ಡಿ, ಬಿ.ಗಣೇಕಲ್, ಮುಷ್ಟೂರು, ಕ್ಯಾದಿಗ್ಗೇರಾ, ಗಲಗ, ಆಲ್ಕೊಡ ಸೇರಿ ತಾಲೂಕಿನಾದ್ಯಂತ ವಿವಿಧ ಗ್ರಾಮಗಳಲ್ಲಿ ಮೊಹರಂ ಆಚರಿಸಿದರು.

ಪಟ್ಟಣದ 9 ಮಸೀದಿಗಳಲ್ಲಿ ಸ್ಥಾಪಿಸಲಾಗಿದ್ದ ಅಲಾಯಿ ದೇವರುಗಳಿಗೆ ಭಕ್ತರು,ಸಕ್ಕರೆ,ಕಾಯಿ,ಊದುಬತ್ತಿ, ಲೋಬಾನ ಮತ್ತು ಬೆಳ್ಳಿ ಸಾಮಗ್ರಿಗಳು ಸಮರ್ಪಿಸಿ ತಮ್ಮ ಹರಕೆಗಳನ್ನು ತೀರಿಸಿದರು. ಗುರುವಾರ ರಾತ್ರಿಯಿಂದ ಶುಕ್ರವಾರ ಬೆಳಗಿನ ಜಾವದವರೆಗೆ ನಡೆದ ಖತಲ್ ರಾತ್ರಿಯು ಅದ್ದೂರಿಯಾಗಿ ಆಚರಿಸಲ್ಪಟ್ಟಿತು.

ರಾತ್ರಿಯ ವಿಶೇಷ ಆಕರ್ಷಣೆಯೆಂದರೆ ಸತ್ಯನಾರಾಯಣನಾಯಕ ಪೋಲಿಸ್ ಪಾಟೀಲ್ 2ನೇ ಪುಟಕ್ಕೆ

## ಕಲ್ಲಿನ ಕೋಟೆ ಕಾವ್ಯೋತ್ಸವದಲ್ಲಿ ರಾಯಚೂರು ಕವಿಗಳ ಸಾಧನೆ 'ರೈತ ದೇವೋಭವ' ಕವನ ಸಂಕಲನಕ್ಕೆ ಸತಿದೇವಿ ಹಾಗೂ ವಿನಾಯಕ ಆರ್. ಜಾಲಹಳ್ಳಿ ಅವರ ಕವನಗಳು ಆಯ್ಕೆ

ಧೈರ್ಯದ ದಾರಿ

**ಚಿತ್ರದುರ್ಗ, ಜೂ. 27:** ನಗರದ ಪತ್ರಿಕಾ ಭವನದಲ್ಲಿ ಇತ್ತೀಚೆಗೆ ನಡೆದ ಕಲ್ಲಿನ ಕೋಟೆ ಕಾವ್ಯೋತ್ಸವ ಹಾಗೂ 'ರೈತ ದೇವೋಭವ' ಕವನ ಸಂಕಲನ ಬಿಡುಗಡೆ ಸಮಾರಂಭದಲ್ಲಿ ರಾಯಚೂರು ಜಿಲ್ಲೆಯ ಹವ್ಯಾಸಿ ಕವಿಗಳಾದ ಶ್ರೀಮತಿ ಸತಿದೇವಿ ಹಾಗೂ ವಿನಾಯಕ ಆರ್. ಜಾಲಹಳ್ಳಿ ಅವರ ಕವನಗಳು ಆಯ್ಕೆಯಾಗಿರುವುದು ಸಾಹಿತ್ಯ ವಲಯದಲ್ಲಿ 2ನೇ ಪುಟಕ್ಕೆ



ಮೊದಲನೇ ಪುಟದಿಂದ

# ಭಾವೈಕ್ಯತೆಯ ಹಬ್ಬ ಮೊಹರಂ: ಅರಕೇರಾ ಪಟ್ಟಣದಲ್ಲಿ ಸಡಗರದ ತೆರೆ

ರವರ ನಿವಾಸದ ಆವರಣ ಚಾವಡಿ ಕಟ್ಟೆಯ ಬಳಿ ನಡೆದ ಅಲಾಯಿ ದೇವರುಗಳ ಮುಖಾಮುಖಿ ಭೇಟಿ .ಈ ದೃಶ್ಯವು ನೆರೆದಿದ್ದ ಸಹಸ್ರಾರು ಭಕ್ತರಿಗೆ ರೋಮಾಂಚನಕಾರಿ ಅನುಭವನ್ನು ನೀಡಿತು. ಅವರ ಕಣ್ಣುಗಳಲ್ಲಿ ಭಕ್ತಿ ಮತ್ತು ಆನಂದದ ಹೊಳಪು ಮೂಡಿಸಿತು.

ರಾತ್ರಿಯಿಡೀ ಯುವಕರು ಮತ್ತು ಮಹಿಳೆಯರು ಎಲ್ಲ ಮಸೀದಿಗಳಿಗೆ ಭೇಟಿ ನೀಡಿ ಭಕ್ತರು ಅಗ್ನಿಕುಂಡ ತುಳಿಯುವುದನ್ನು ಕಣ್ತುಂಬಿಕೊಂಡರು.ಈಸಂಪ್ರದಾಯಾಯಿಕ ಆಚರಣೆಯು ಹಬ್ಬದ ಪ್ರಮುಖ ಭಾಗವಾಗಿದ್ದು ಭಕ್ತರ ನಂಬಿಕೆ ಮತ್ತುಧೈರ್ಯವನ್ನು ಪ್ರತಿಬಿಂಬಿಸುತ್ತದೆ, ಯುವಕರು ಕಾಳಿಗೆ ಗೆಜ್ಜೆ ಕಟ್ಟಿಕೊಂಡು,ಗುಂಪು ಗುಂಪಾಗಿ ಛತ್ರಿ ಮತ್ತು ಕೋಲುಗಳನ್ನು ಹಿಡಿದು ಹಲಗೆಯ ತಾಳಕ್ಕೆ ಕುಣಿದರು. ಕೆಲವರು ಒಂದೇ ಬಣ್ಣದ ಸಮವಸ್ತ್ರವನ್ನು ಧರಿಸಿ ಹಬ್ಬಕ್ಕೆ ಮತ್ತಷ್ಟು ಮೆರಗು ತಂದರು.,ಸಾಮೂಹಿಕ ಆಚರಣೆಯ ಸೌಂದರ್ಯವನ್ನು ಎತ್ತಿಹಿಡಿದರು.

ಅಂತಿಮ ಮೇರವಣಿಗೆ ಮತ್ತು ವಿಸರ್ಜನೆ: ಹಬ್ಬದ ಕೊನೆಯ ದಿನವಾದ ಶುಕ್ರವಾರ ಸಂಜೆ 9 ಮಸೀದಿಯನ ಅಲಾಯಿ ದೇವರುಗಳು (ಫೀರಗಳು) ಸತ್ಯನಾರಾಯಣನಾಯಕ ಪೋಲಿಸ್ ಪಾಟೀಲ್ ಇವರ ಮನೆಯ ಅವರಣದಲ್ಲಿ ಮೇರವಣಿಗೆಯ ಮೂಲಕ ಚಾವಡಿ ಕಟ್ಟೆಯ ಬಳಿ ಅಲಾಯಿ ದೇವರುಗಳ ಮುಖಾ ಮುಖಿಯಾಗಿ ಬೇಟಿಯಾಗಿ ಸಹಸ್ರಾರು ಸಂಖ್ಯೆಯಲ್ಲಿ ಜನರು ಈ ಹಬ್ಬದಲ್ಲಿ ಭಾಗವಹಿಸಿ ಶ್ರದ್ದೆ ಮತ್ತು ಭಕ್ತಿಯಿಂದ ಆಚರಿಸಿದರು. ವಿಸರ್ಜನೆ ಗೌಡರ ಬಾವಿಯಲ್ಲಿ ವಿಸರ್ಜನೆ ಮಾಡಲಾಯಿತು ನಂತರ ಭಾಗವಹಿಸಿದವರಿಗೆ ಜೊಂಗ್ಯ ಪ್ರಸಾದವನ್ನು ನೀಡಿದರು,

ಸಂದರ್ಭದಲ್ಲಿ ಮುಖಂಡರುಗಳಾದ ಸತ್ಯನಾರಾಯಣನಾಯಕ ಪೋಲಿಸ್ ಪಾಟೀಲ್ ,ಹನುಮಂತ್ರಾಯನಾಯಕ ಪೋಲಿಸ್ ಪಾಟೀಲ್ ,ಕೆ,ಅನಂತರಾಜನಾಯಕ,ಆರ್ ಡಿಸಿಸಿ ಬ್ಯಾಮಕ್ ನಿರ್ದೇಶಕ ಎ.ರಾಜಶೇಖರನಾಯಕ, ಸೀತಣ್ಣನಾಯಕ ಗುರಿಕಾರ, ಚನ್ನವೀರಯ್ಯಸ್ವಾಮಿ ಹಿರೇಮಠ, ಚಂದ್ರಶೇಖರಶೆಟ್ಟಿ,ಪರಮೇಶಪೂಜಾರಿ, ವೆಂಕಟೇಶನಾಯಕದೊರೆ, ಹನುಮಂತ್ರಾಯಪೂಜಾರಿ, ಶೇಖರಪ್ಪಗೌಡಮಾಲಿಪಾಟೀಲ್, ಬಸವರಾಜಕ್ವಾಟೆದೊರೆ, ರಾಚಯ್ಯಸ್ವಾಮಿಮಠಪತಿ, ಸಿದ್ದಾರ್ಥಹವಲ್ದಾರ, ವರದರಾಜನಾಯಕದೊರೆ ತೆಗ್ಗಿಹಾಳ,ಅಲಿಂಖಾಜಿ,ಸೇರಿದಂತೆ ಪಟ್ಟಣದಲ್ಲಿನ ಸಮಸ್ತ ನಾಗರಿಕರು ಸತ್ತಮತ್ತಲ್ಲಿನ ಗ್ರಾಮಸ್ಥರು ಭಾಗವಹಿಸಿದ್ದರು. ಅರಕೇರಾದಲ್ಲಿ ಮೊಹರಂ ಹಬ್ಬವು ಕೇವಲ ಒಂದು ಧಾರ್ಮಿಕ ಆಚರಣೆಯಾಗಿರದೆ,ಸೌಹಾರ್ದತೆ ಮತ್ತು ಸಹಬಾಳ್ವೆಯ ಸಂಕೇತವಾಗಿ ಮೂಡಿಬಂದಿತು. ಮೊಹರಂ ಹಬ್ಬದಲ್ಲಿ ದೇವದುರ್ಗ ಪೋಲಿಸ್ ಠಾಣೆಯ ಸಿಬ್ಬಂದಿಯವರು ಬಿಗಿ ಬಂದೋಬಸ್ತ ವ್ಯವಸ್ಥೆ ಮಾಡಿದರು.

# ಕಲ್ಲಿನ ಕೋಟೆ ಕಾವ್ಯೋತ್ಸವದಲ್ಲಿ ರಾಯಚೂರು ಕವಿಗಳ ಸಾಧನೆ 'ರೈತ ದೇವೋಭವ' ಕವನ ಸಂಕಲನಕ್ಕೆ ಸತಿದೇವಿ ಹಾಗೂ ವಿನಾಯಕ ಆರ್. ಜಾಲಹಳ್ಳಿ ಅವರ ಕವನಗಳು ಆಯ್ಕೆ

ಸಂತಸ ಮೂಡಿಸಿದೆ. ಕಾರ್ಯಕ್ರಮದಲ್ಲಿ ಸಂಪಾದಕರಾದ ಕಲಾರತ್ನ ಪೋಟ್ಲೂರಿ ಹರಿಕೃಷ್ಣ ಹಾಗೂ ನಿಶಾ ಮುಳುಗುಂದ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡ 'ರೈತ ದೇವೋಭವ' ಕವನ ಸಂಕಲನವನ್ನು ಲೋಕಾರ್ಪಣೆ ಮಾಡಲಾಯಿತು.

ಈ ಸಂಕಲನದಲ್ಲಿ ಶ್ರೀಮತಿ ಸತಿದೇವಿ ಅವರ "ರೈತಣ್ಣ ನಮ್ಮಣ್ಣ" ಹಾಗೂ ವಿನಾಯಕ ಆರ್. ಜಾಲಹಳ್ಳಿ ಅವರ "ಕಾಯಕಯೋಗಿ ರೈತಣ್ಣ" ಎಂಬ ಎರಡು ಕವನಗಳು ಪ್ರಕಟಗೊಂಡಿವೆ.
ಕವನ ಸಂಕಲನ ಬಿಡುಗಡೆ ಸಮಾರಂಭದಲ್ಲಿ ಈ ಇಬ್ಬರು ಕವಿಗಳನ್ನು ಪ್ರಮಾಣಪತ್ರ ಹಾಗೂ ಗೌರವಪೂರ್ವಕವಾಗಿ ಕವನ ಸಂಕಲನದ ಪ್ರತಿಗಳನ್ನು ನೀಡಿ ಸನ್ಮಾನಿಸಲಾಯಿತು.

ಈ ಸಾಧನೆಯು ರಾಯಚೂರು ಜಿಲ್ಲೆಯ ಸಾಹಿತ್ಯಾಸಕ್ತರಿಗೆ ಹೆಮ್ಮೆಯ ವಿಷಯವಾಗಿದ್ದು, ಸ್ಥಳೀಯ ಕವಿಗಳ ಸಾಹಿತ್ಯ ಪ್ರತಿಭೆಗೆ ಮತ್ತೊಂದು ಮನ್ನಣೆಯಾಗಿ ಪರಿಣಮಿಸಿದೆ.

# ಲೈನ್ ಮ್ಯಾನ್ ನಿರ್ಲಕ್ಷ್ಯದಿಂದ ವಿದ್ಯುತ್ ತಗುಲಿ ಸಾವನ್ನಪ್ಪಿದ ರೈತ ಬಸಪ್ಪ ಪೂಜಾರಿ

**ಅಫಜಲಪುರ:ಜೂ.27:** ವಿದ್ಯುತ್ ತಂತಿ ಜೋಡಿಸಲು ಲೈನ್ ಮ್ಯಾನ್ ತನ್ನ ಬದಲಿಗೆ ರೈತ ಬಸಪ್ಪ ಪೂಜಾರಿ (42) ಎನ್ನುವವರನ್ನು ವಿದ್ಯುತ್ ಕಂಬಕ್ಕೆ ಏರಿಸಿದಾಗ ತಂತಿ ಸ್ಪರ್ಶಿಸಿ ವಿದ್ಯುತ್ ತಗುಲಿ ದಾರುಣವಾಗಿ ರೈತ ಮೃತಪಟ್ಟಿರುವ ದುರ್ಘಟನೆ ಶುಕ್ರವಾರ ಬೆಳಗಿನ ಜಾವ ಸಂಭವಿಸಿದೆ.



ತಾಲೂಕಿನ ಅಳ್ಳಗಿ(ಕೆ) ಗ್ರಾಮದ ರೈತ ಬಸಪ್ಪ ಪೂಜಾರಿ ಎನ್ನುವವರನ್ನು ಲೈನ್ ಮ್ಯಾನ್ ಗುಂಡೋಜಿ ಚೌವ್ಹಾಣ್ ಎನ್ನುವವರು ಕರೆದುಕೊಂಡು ಹೋಗಿ ವಿದ್ಯುತ್ ತಂತಿ ಕಡಿತಗೊಂಡಿದೆ. ನನಗೆ ಕಂಬ ಇರಲು ಆಗುವುದಿಲ್ಲ, ಈಗ ಎಲ್.ಸಿ ತೆಗೆದುಕೊಂಡಿದ್ದೇನೆ ನೀನೇ ಕಂಬ ಏರಿ ವಿದ್ಯುತ್ ತಂತಿ ಸರಿಪಡಿಸು ಎಂದಾಕ್ಷಣ ವಿದ್ಯುತ್ ಕಂಬ ಏರಿದ ರೈತ ಬಸಪ್ಪ ಪೂಜಾರಿ ಇವರು ವಿದ್ಯುತ್ ತಂತಿ ಸ್ಪರ್ಶಿಸಿದಾಗ ಭೀಕರವಾಗಿ ವಿದ್ಯುತ್ ತಗುಲಿದೆ. ತಕ್ಷಣವೇ ಅಫಜಲಪುರ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಿದ್ರು ಕೂಡ ಕೊನೆಗೂ ರೈತ ಮೃತಪಟ್ಟಿದ್ದಾರೆ.ಈ ಘಟನೆ ಸಂಭವಿಸುತ್ತಿದ್ದಂತೆ ಪ್ರಗತಿಪರ ರೈತ ಸಂಘಟನೆಗಳು ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಜಮಾಯಿಸಿ ಬೃಹತ್ ಪ್ರತಿಭಟನೆ ನಡೆಸಿದರು.

ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ರಮೇಶ್ ಹೂಗಾರ ಮಾತನಾಡಿ,ವಿದ್ಯುತ್ ಅವಘಡದಲ್ಲಿ ಮೃತಪಟ್ಟ ಬಸಪ್ಪ ಪೂಜಾರಿ ಕುಟುಂಬಕ್ಕೆ 50 ಲಕ್ಷ ರೂ.ಪರಿಹಾರ ನೀಡುವುದರ ಜತೆಗೆ ಸರ್ಕಾರದಿಂದ ಮಕ್ಕಳಿಗೆ ನೆರವು ಆಗುವಂತೆ ಸೌಲಭ್ಯಗಳನ್ನು ಒದಗಿಸಬೇಕು,ರಾಜ್ಯ ಸರ್ಕಾರ ರೈತರನ್ನು ನಿರಂತರವಾಗಿ ಕಡೆಗಣನೆ ಮಾಡುತ್ತಿದೆ ಎಂದು ದೂರಿದ್ದರು.

ಪ್ರಗತಿಪರ ಹೋರಾಟಗಾರ ಶ್ರೀಮಂತ ಬಿರಾದಾರ ಮಾತನಾಡಿ,ಜೆಸ್ಕಾಂ ಅಧಿಕಾರಿಗಳು ನಿರಂತರವಾಗಿ ನಿರ್ಲಕ್ಷ್ಯ ವಹಿಸಿಕೊಳ್ಳುತ್ತಿದ್ದಾರೆ. ಎಲ್.ಸಿ ಇಲ್ಲದಿದ್ದರೂ ಯಾವ ಕಾರಣಕ್ಕೆ ಲೈನ್ ಮ್ಯಾನ್ ಗುಂಡೋಜಿ ಚೌವ್ಹಾಣ್ ಅವರು ರೈತ ಬಸಪ್ಪ ಪೂಜಾರಿ ಅವರಿಗೆ ವಿದ್ಯುತ್ ಕಂಬ ಏರಿಸಿದ್ದು,ಪ್ರತಿ ತಿಂಗಳು ಲಕ್ಷಾಂತರ ರೂ.ಸಂಬಳ ಪಡೆದುಕೊಂಡು ರೈತರಿಗೆ ವಿದ್ಯುತ್ ಕಂಬ ಏರಿಸುವುದಾದರೆ ಲೈನ್ ಮ್ಯಾನ್ ಗಳ ಕೆಲಸವೇನು,ತಕ್ಷಣವೇ ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತುಗೊಳಿಸುವ ಮೂಲಕ ಮೃತಪಟ್ಟ ರೈತ ಕುಟುಂಬಕ್ಕೆ ಸೂಕ್ತ ಪರಿಹಾರ ಒದಗಿಸಬೇಕು ಎಂದರು.

ಜೆಸ್ಕಾಂ ಇಇ ಮುರುಗೇಶ್ ಮಠಪತಿ ಮಾತನಾಡಿ, ಒಬ್ಬ ಅಧಿಕಾರಿ ತಪ್ಪಿನಿಂದ ಆಗಿರುವ ದುರ್ಘಟನೆ ಸರ್ಕಾರದಿಂದ ಪರಿಹಾರ ನೀಡಲು ಅವಕಾಶವಿಲ್ಲ. ಇಲಾಖೆ ತಪ್ಪಿನಿಂದಾಗಿ ನಡೆದಿರುವ ದುರ್ಘಟನೆಗೆ ಪರಿಹಾರ ನೀಡಲು ಅವಕಾಶವಿದೆ. ಮೇಲಾಧಿಕಾರಿಗಳ ಮನವೊಲಿಸಿ 5ಲಕ್ಷ ರೂ.ಪರಿಹಾರ ನೀಡಲಾಗುವುದು, ಕಚೇರಿಯ ಸಿಬ್ಬಂದಿಗಳಿಂದ 8 ಲಕ್ಷ ರೂ. ಸಂಗ್ರಹಿಸಿ ಕೊಡಲಾಗುವುದು.ವ2ಲಕ್ಷ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಕೊಡಲು ಪತ್ರ ಬರೆಯಲಾಗುವುದು, ನೌಕರಿ ಕೊಡಲು ಅವಕಾಶವಿಲ್ಲ, ಆದರೆ ಏಜೆನ್ಸಿ ಮೂಲಕ ಗುತ್ತಿಗೆ ಆಧಾರದಲ್ಲಿ ಕೆಲಸ ಕೊಡಿಸುತ್ತೇವೆ ಎಂದು ಭರವಸೆ ನೀಡಿದ್ದರಿಂದ ಹೋರಾಟಗಾರರು ಪ್ರತಿಭಟನೆ ವಾಪಸ್ ಪಡೆದರು.

ಪ್ರತಿಭಟನಾ ಸ್ಥಳಕ್ಕೆ ಡಿವೈಎಸ್ಪಿ ತಮ್ಮರಾಯ ಪಾಟೀಲ್, ತಹಶೀಲ್ದಾರ್ ಸಂಜೀವಕುಮಾರ ದಾಸರ, ಇಇ ಮುರುಗೇಶ್ ಮಠಪತಿ, ಎಇಇ ನಾಗರಾಜ್ ಕೆ,ಸಿಪಿಐ ಲಖನ್ ಮಸಗುಪ್ಪಿ, ಪಿಎಸ್‌ಗಳಾದ ಸೋಮಲಿಂಗ ಒಡೆಯರ್, ವಾತ್ಸಲ್ಯ ಬಿರಾದಾರ, ಸಂಗೀತಾ ಸಿಂಧೆ, ಹೋರಾಟಗಾರ ಶಾಂತಕುಮಾರ ಅಂಜುಟಗಿ, ರಮೇಶ್ ಪೂಜಾರಿ, ಮಹಾಂತೇಶ ಜಮಾದಾರ, ಬಸವರಾಜಗೌಡ ಪಾಟೀಲ್, ಸಿದ್ದು ಮಗಿ,ಸಿದ್ದು ದಣ್ಣೂರ, ಮಹಾಂತೇಶ ಬಡಿಗೇರ, ರಮೇಶ್ ಪಾಟೀಲ್, ಎಂ.ಎಲ್.ಪಟೇಲ್ ಬಳೂಂಡಗಿ, ಅಶೋಕ್ ಪವಾರ್,ನೂರೋದ್ದಿನ್ ಬಾಗವಾನ, ಇಮಾಮ್ ಶೇಖ್, ರವೇಶ್ ಶೆಟ್ಟಿ, ಸಿದ್ದು ಪೂಜಾರಿ, ಬೀರಣ್ಣ ಕನಕ ಟೇಲರ್,ರಾಜಸಾಬ ಶೇಖ್, ರವಿ ನಾಗಪ್ಪ ಬೋರಟಗಿ, ರಹುಬಾ ಪಾಟೀಲ್, ಶ್ರೀಶೈಲ್ ಹೊಸಮನಿ, ಶಾಮ ಹೊಸಮನಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.
ರೈತ ಬಸಪ್ಪನ ಮೂವರು ಮಕ್ಕಳಿಗೆ ಅನ್ಯಾಯ ಆಗದಂತೆ ಸರಕಾರವೇ ವಿದ್ಯಾಭ್ಯಾಸದ ಜವಾಬ್ದಾರಿ ವಹಿಸಿಕೊಳ್ಳಬೇಕು, ಕುಟುಂಬಕ್ಕೆ ಆಸರೆ ಆಗುವಂತೆ ಪತ್ನಿಗೆ ಸರ್ಕಾರಿ ನೌಕರಿ ಕೊಡಬೇಕು ಎಂದು ಆಗ್ರಹಿಸಿದರು. ವಿದ್ಯುತ್ ಇಲಾಖೆಯ ಅಧಿಕಾರಿಗಳು ಮತ್ತೊಮ್ಮೆ ಇಂತಹ ದುರ್ಘಟನೆ ಸಂಭವಿಸಿದಂತೆ ಎಚ್ಚರ ವಹಿಸಬೇಕು. ಶಾಸಕರೊಂದಿಗೆ ಚೆರ್ಚಿಸಿ ಸರ್ಕಾರದ ವತಿಯಿಂದ ಹೆಚ್ಚಿನ ಪರಿಹಾರ ನೀಡಲು ಪ್ರಯತ್ನ ಮಾಡಲಾಗುವುದು.

-ಲಚ್ಚಪ್ಪ ಎಸ್. ಜಮಾದಾರ

ಅಧ್ಯಕ್ಷರು, ಕೋಲಿ ಕಬ್ಬಲಿಗ ಎಸ್.ಟಿ. ಹೋರಾಟ ಸಮಿತಿ ಹಾಗೂ ಕಾಂಗ್ರೆಸ್ ಮುಖಂಡರು, ಅಫಜಲಪುರ

ಪ್ರಯಾಣಿಕರ ಪರದಾಟ!

ವಿದ್ಯುತ್ ಅವಘಡದಲ್ಲಿ ಮೃತಪಟ್ಟ ರೈತ ಬಸಪ್ಪ ಪೂಜಾರಿ ಕುಟುಂಬಕ್ಕೆ ನ್ಯಾಯ ಒದಗಿಸುವಂತೆ ಪ್ರಗತಿಪರ ರೈತ ಹೋರಾಟಗಾರರು ಬಸವೇಶ್ವರ ವೃತ್ತದಲ್ಲಿ ರಾಜ್ಯ ಹೆದ್ದಾರಿ ತಡೆದು 7 ಗಂಟೆಗಳ ಕಾಲ ಪ್ರತಿಭಟನೆ ನಡೆಸಿದ್ದರಿಂದ ಸುಮಾರು 5-6 ಕಿಲೋಮೀಟರವರೆಗೆ ವಾಹನಗಳು ನಿಂತಿಕೊಂಡಿರುವುದರಿಂದ ಪ್ರಯಾಣಿಕರು ಪರದಾಡುವ ಸ್ಥಿತಿ ನಿರ್ಮಾಣವಾಯಿತು. ವಾಹನಗಳ ಸುಗಮವಾಗುವಂತೆ ಪೊಲೀಸರು ಹರಸಾಹಸ ಪಡಬೇಕಾಯಿತು.

# ಮುಂಡರಗಿಯಲ್ಲಿ ಮತ್ತೆ ಭುಗಿಲೆದ್ದ ಆತಂಕ: ಆರೋಪಗಳ ಸುಳಿಯಲ್ಲಿ ಗ್ರಾಮ, ತನಿಖೆಗೆ ಗ್ರಾಮಸ್ಥರ ಕೂಗು

**ಯಾದಗಿರಿ: ಜೂ.27:**ತಾಲೂಕಿನ ಮುಂಡರಗಿ ಗ್ರಾಮದಲ್ಲಿ ಇತ್ತೀಚಿನ ಬೆಳವಣಿಗೆಗಳು ಗ್ರಾಮಸ್ಥರಲ್ಲಿ ಆತಂಕದ ವಾತಾವರಣ ಸೃಷ್ಟಿಸಿದ್ದು, ಕಾನೂನು ಸುವ್ಯವಸ್ಥೆ ಕುರಿತು ಹಲವು ಪ್ರಶ್ನೆಗಳು ಎದ್ದಿವೆ. ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಚಂದ್ರಶೇಖರ್ ಭಾವುರು ಅವರ ವಿರುದ್ಧ ಗ್ರಾಮಸ್ಥರು ಗಂಭೀರ ಆರೋಪಗಳನ್ನು ಮಾಡಿದ್ದು, ಗ್ರಾಮದಲ್ಲಿ ಪದೇಪದೇ ಗಲಾಟೆ ಹಾಗೂ ಅಶಾಂತಿಯ ವಾತಾವರಣ ನಿರ್ಮಾಣವಾಗುತ್ತಿದೆ ಎಂದು ದೂರಿದ್ದಾರೆ.

ಗ್ರಾಮಸ್ಥರ ಆರೋಪದ ಪ್ರಕಾರ, ತಾನೊಬ್ಬ ವಕೀಲ ಎಂದು ಜನರ ಮುಂದೆ ಬಿಂಬಿಸಿಕೊಂಡು, ತನ್ನ ಅಣ್ಣ-ತಮ್ಮಂದಿರೊಂದಿಗೆ ಸೇರಿ ಗ್ರಾಮದಲ್ಲಿ ಒಂದಲ್ಲೊಂದು ವಿಚಾರದಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಇದರಿಂದ ಗ್ರಾಮದಲ್ಲಿ ಸಾಮಾನ್ಯ ಜನರು ಆತಂಕದ ನಡುವೆ ಜೀವನ ನಡೆಸುವಂತಾಗಿದೆ ಎಂದು ಕೆಲ ಗ್ರಾಮಸ್ಥರು ತಿಳಿಸಿದ್ದಾರೆ.

ಗ್ರಾಮದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ತಕ್ಷಣ ಮಧ್ಯಪ್ರವೇಶಿಸಿ, ಯಾವುದೇ ಒತ್ತಡಕ್ಕೆ ಒಳಗಾಗದೆ ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಗ್ರಾಮಸ್ಥರ ಆರೋಪದಂತೆ, ಚಂದ್ರಶೇಖರ್ ಮುತ್ಯ ಅವರ ವಿರುದ್ಧ ದೂರು ನೀಡಲು ಮುಂದಾದವರು ಹಾಗೂ ಯಾದಗಿರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಾಬಣ್ಣ ಅವರ ಬಳಿ ಇದ್ದ ಕೆಲವರೊಂದಿಗೆ ಚಂದ್ರಶೇಖರ್ ಹಾಗೂ ಅವರ ಕುಟುಂಬದವರು ಜೀವ ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ. ಈ ಬೆಳವಣಿಗೆಯಿಂದ ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ ಎಂದು ಯಂಕಪ್ಪ ಮುಂಡರಗಿ ಅವರು ಪತ್ರಕರ್ತರ ಮುಂದೆ . ಅಳಲನ್ನು ತೋಡಿಕೊಂಡಿದ್ದಾರೆ

ಗ್ರಾಮದಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ಮಾತನಾಡಲು ಕೆಲವರು ಹಿಂದೇಟು ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಭಾವ ಹಾಗೂ ಕುಟುಂಬದ ಬೆಂಬಲದಿಂದ ದೂರು ನೀಡಲು ಕೆಲವರು ಹಿಂಜರಿಯುತ್ತಿದ್ದಾರೆ ಎಂಬ ಆರೋಪವೂ ಕೇಳಿಬಂದಿದೆ.

ಹಿಂದಿನ ಘಟನೆಗಳ ಉಲ್ಲೇಖ ಅಪರಾಧ ಸಂಖ್ಯೆ 0047/ 2025 2025ರಲ್ಲಿ ಗುರುಮಠಕಲ್ ತಾಲೂಕಿನ ಸಿದ್ದಾಪುರ ಗ್ರಾಮದಲ್ಲಿ ನಡೆದ ಮದುವೆ ಮೆರವಣಿಗೆ ವೇಳೆ ಪರವಾನಗಿ ಇಲ್ಲದೆ ಗಾಳಿಯಲ್ಲಿ ಗುಂಡು ಹಾರಿಸಿದ (Celebratory Firing) ಆರೋಪದ ಪ್ರಕರಣದಲ್ಲಿ ಪೊಲೀಸರು ಓರ್ವನನ್ನು ಬಂಧಿಸಿದ್ದರು. ಈ ಪ್ರಕರಣದಲ್ಲಿ ಮುಂಡರಗಿ ಗ್ರಾಮದ ಚಂದ್ರಶೇಖರ್ ತಂದೆ ಮಲ್ಲಪ್ಪ ಮುತ್ಯಾ ಎಂಬಾತ ಆರೋಪಿ ಎಂದು ಪೊಲೀಸ್ ಮೂಲಗಳ ಪ್ರಕಾರ ತಿಳಿಸಲಾಗಿತ್ತು.

ಇದಲ್ಲದೆ, ಎರಡು ವರ್ಷಗಳ ಹಿಂದೆ ಶಿವರಾತ್ರಿ ಜಾಗರಣೆ



ದಿನದಂದು ಕೂಡ ಗಲಾಟೆ ನಡೆದಿತ್ತು ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.
ಇದರ ಮುಂದುವರಿದ ಭಾಗವಾಗಿ ಶುಕ್ರವಾರ ಮಧ್ಯಾಹ್ನ ಸುಮಾರು 2.30ರ ವೇಳೆಗೆ ಹೊಲದಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ಸಾಬಣ್ಣ ತಂದೆ ಹನುಮಂತ್ ಅವರ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಆರೋಪಿಸಲಾಗಿದೆ. ಘಟನೆಯಲ್ಲಿ ಸಾಬಣ್ಣ ಅವರಿಗೆ ಗಂಭೀರ ಗಾಯಗಳಾಗಿದ್ದು, ಪ್ರಸ್ತುತ ಯಾದಗಿರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿದುಬಂದಿದೆ.

ಈ ಕುರಿತು ಗ್ರಾಮಸ್ಥರಾದ ಭೀಮು ತಂದೆ ಮಲ್ಲಪ್ಪ, ಚಂದ್ರಶೇಖರ್ ಮುತ್ಯೆ, ಸುಭಾಷ್ ತಂದೆ ಮಲ್ಲಪ್ಪ ಹಾಗೂ ಯಂಕಪ್ಪ ತಂದೆ ಹನುಮಂತ್ ಅವರು ಆರೋಪಿಸಿ, ಯಾವುದೇ ಕಾರಣವಿಲ್ಲದೆ ಜಗಳ ನಡೆಸಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಘಟನೆ ಕುರಿತು ಭೀಮರಾಯ ತಂದೆ ಸುಭಾಷ್, ತಾಯಪ್ಪ ತಂದೆ ಸಣ್ಣ ತಾಯಪ್ಪ, ಭೀಮಣ್ಣ ತಂದೆ ಸಾಬಣ್ಣ, ಬಸಪ್ಪ ತಂದೆ ಬುಗಪ್ಪ ಹಾಗೂ ಧರ್ಮಪ್ಪ ತಂದೆ ತಿಪಣ್ಣ ಸೇರಿದಂತೆ ಹಲವರು ಮಾಹಿತಿ ನೀಡಿದ್ದು, ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸಬೇಕು ಎಂದು ಮನವಿ ಮಾಡಿದ್ದಾರೆ.

ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಿ, ಜನರಲ್ಲಿ ಸುರಕ್ಷತೆಯ ಭಾವನೆ ಮೂಡಿಸುವುದು ಪೊಲೀಸ್ ಇಲಾಖೆಯ ಜವಾಬ್ದಾರಿಯಾಗಿದ್ದು, ಆರೋಪಗಳ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಭವಿಷ್ಯದ ದೂರದೃಷ್ಟಿ ಚಿಂತನೆಗೆ ಸಮ್ಮೇಳನ ಪ್ರೋತ್ಸಾಹದಾಯಕ

**ಕಲಬುರಗಿ:ಜೂ.27:** ಯುವ ಜನಾಂಗದ ಶೈಕ್ಷಣಿಕ ಕಲಿಕೆ ಮತ್ತು ಭವಿಷ್ಯದ ದೂರದೃಷ್ಟಿ ಚಿಂತನೆಗೆ ಸಮ್ಮೇಳನ ಪ್ರೋತ್ಸಾಹದಾಯಕವಾಗಿದ್ದು, ಹಳೆಯ ವಿದ್ಯಾರ್ಥಿಗಳ ಸಹಕಾರದಿಂದ ಎರಡು ದಿನಗಳ ಸಮ್ಮೇಳನದ ಯಶಸ್ವಿಯಾಗಲು ಸಾಧ್ಯವಾಗಿದೆ ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ದಯಾನಂದ ಅಗಸರ ಪ್ರಶಂಸೆ ವ್ಯಕ್ತಪಡಿಸಿದರು.




ಗುಲಬರ್ಗಾ ವಿಶ್ವವಿದ್ಯಾಲಯದ ಸೂಕ್ಷ್ಮ ಜೀವಶಾಸ್ತ್ರ ವಿಭಾಗ ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಆಯೋಜಿಸಿದ ಸುವರ್ಣ ಮಹೋತ್ಸವ ವರ್ಷಾಚರಣೆ ಮತ್ತು 'ಸೂಕ್ಷ್ಮಜೀವಿಗಳ ವ್ಯಾಪ್ತಿ: ಉತ್ತಮ ನಾಳೆಗಾಗಿ ತಂತ್ರಜ್ಞಾನ' ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಹೊಸತನದ ಆಲೋಚನೆ ಮತ್ತು ದೂರದೃಷ್ಟಿ ಮೂಲಕ ನಾವೆಲ್ಲರೂ ವಿಭಾಗದ ಏಳಿಗೆಗೆ ಶ್ರಮಿಸಿ ಮುಂದಿನ 75 ವರ್ಷಗಳ ಸಂಭ್ರಮಾಚರಣೆಗೆ ನಾಂದಿಯಾಡಬೇಕಿದೆ. ಹಳೆಯ ವಿದ್ಯಾರ್ಥಿಗಳ ಸಾಧನೆ ಇಂದಿನ ಯುವಜನತೆಗೆ ಪ್ರೇರಣೆಯಾಗುವಂತಿರಲಿ ಎಂದ ಅವರು ವಿದ್ಯಾರ್ಥಿಗಳ ಸಂಘಕ್ಕೆ ನೇಮಕಗೊಂಡಿರುವ ನೂತನ ಪದಾಧಿಕಾರಿಗಳಿಗೆ ಅಭಿನಂದನೆ ತಿಳಿಸಿದರು.

ಬೆಂಗಳೂರು ನಿಮಾನ್ಸ್ ನಿವೃತ್ತ ಪ್ರಾಧ್ಯಾಪಕ ಪ್ರೊ. ಎಸ್. ಎ. ಪಾಟೀಲ್ ಮಾತನಾಡಿ ವಿದ್ಯಾರ್ಥಿಗಳಿಗೆ ಇಂತಹ ಸಮ್ಮೇಳನ, ಕಾರ್ಯಾಗಾರ, ಸಂಕಿರಣ, ಉಪನ್ಯಾಸಗಳಿಂದ ಅತ್ಯಂತ ಮಹತ್ವದ ವಿಷಯಗಳ ಇತ್ತೀಚಿನ ಬೆಳವಣಿಗೆ ಚರ್ಚಿಸಲು ವೇದಿಕೆಗಳಾಗುತ್ತವೆ. ಗ್ರಹಿಕೆ, ಕಲಿಕೆ. ಚಿಂತನ-ಮಂಥನದ ಮೂಲಕ ಅತ್ಯುತಮ ಅನುಭವಗಳು ಸಿಗುತ್ತವೆ. ಜ್ಞಾನ ಗಳಿಕೆಗೆ ಯಾವುದೇ ಮಿತಿಯಿಲ್ಲ. ಜ್ಞಾನದ ಮೂಲಕ ವ್ಯಕ್ತಿತ್ವ, ಕುಶಲತೆ, ಕೌಶಲ್ಯ ಅನುಭವದಿಂದ ಜಾಗತಿಕ ಮಟ್ಟದಲ್ಲಿ ಉತ್ತಮ ಅವಕಾಶಗಳನ್ನು ಪಡೆಯಬಹುದು. ಸಮ್ಮೇಳನದಲ್ಲಿ ಮಂಡಿಸಿದ ವಿಚಾರಗಳು ನಿಮ್ಮ ಗುರಿ ಸಾಧನೆಗೆ ಚೈತನ್ಯದಾಯಕವಾಗಿವೆ ಎಂದರು.

ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಪ್ರೊ. ಕೆ. ಲಿಂಗಪ್ಪ ಮಾತನಾಡಿ ಸುವರ್ಣ ಮಹೋತ್ಸವ ಮತ್ತು ಸಮ್ಮೇಳನದಲ್ಲಿ ಪಾಲ್ಗೊಳ್ಳಲು ದೇಶದ ವಿವಿಧ ರಾಜ್ಯಗಳಿಂದ ಆಗಮಿಸಿರುವುದೇ ನಮಗೆ ನವಚೈತನ್ಯ ಬಂದಂತಾಗಿದೆ. ನಿಮ್ಮೆಲ್ಲರ ಪ್ರೀತಿ ಮತ್ತು ಉದಾರ ಮನದ ಸಹಾಯದಿಂದ ಈ ಸಂಭ್ರಮ ವಿಭಾಗದ ಸಾಧನೆಯ ಮೈಲಿಗಲ್ಲುಗಳು ಹಂಚಿಕೊಳ್ಳುವ ಸೌಭಾಗ್ಯ ನಮಗೆ ದೊರೆತಿದೆ. ವಿಭಾಗದ ವಿದ್ಯಾರ್ಥಿಗಳ ಸಾಧನೆಗೆ ಹಿರಿಯ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಸ್ಪೂರ್ತಿ ಎಂದು ಬಾವಿಸಿದ್ದೇನೆ. ಮುಂದೆಯೂ ನಿಮ್ಮೆಲ್ಲರ ಬೆಂಬಲ, ಸಹಾಯ ಮತ್ತು ಸಹಕಾರ ಹೀಗೆಯೇ ಮಮದುವರಿಯಲಿ ಎಂದು ಹೇಳುವ ಮೂಲಕ ಅಭಿನಂದನೆ ಸಲ್ಲಿಸಿದರು.

ನಿವೃತ್ತ ಪ್ರಾಧ್ಯಾಪಕಿ ಪ್ರೊ. ಅನ್ನಪೂರ್ಣ ನಿಂಬರಗಿ ವಿಭಾಗದ ಕಲಿತ ಅನುಭವಗಳನ್ನು ಬಾವನಾತ್ಮಕ ನುಡಿಗಳಲ್ಲಿ ಹಂಚಿಕೊಂಡರು. ಮುಖ್ಯಸ್ಥೆ ಹಾಗೂ ಸಂಯೋಜಕಿ ಪ್ರೊ. ಎಂ.ಬಿ. ಸುಲೋಚನಾ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರೊ. ಚಂದ್ರಕಾಂತ ಕೆಳಮನಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸೂಕ್ಷ್ಮಜೀವಶಾಸ್ತ್ರ ಹಾಗೂ ಜೀವವಿಜ್ಞಾನ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಅತಿಥಿ ಉಪನ್ಯಾಸಕರು, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿಗಳು ಭಾಗವಹಿಸಿದ್ದರು.

ಸಮ್ಮೇಳನದಲ್ಲಿ ಅತ್ಯುತ್ತಮವಾಗಿ ವಿಷಯ ಮಂಡಿಸಿದ ಸಂಶೋಧಕರಿಗೆ ಬೆಸ್ಟ ಓರಲ್ ಪ್ರಸಂಟೇಷನ್ ಮತ್ತು ಬೆಸ್ಟ್ ಪೋಸ್ಟರ್ ಪ್ರೆಸಂಟೇಷನ್ ಅವಾರ್ಡ್ ಪ್ರಮಾಣಪತ್ರಗಳನ್ನು ನೀಡಲಾಯಿತು. ಕೆಬಿಎನ್ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ತಸ್ಲಿಮ ಬಾನು ಸಮ್ಮೇಳನ ಕುರಿತು ಅನಿಸಿಕೆ ಹಂಚಿಕೊಂಡರು. ಪ್ರೊ. ಯಶವಂತರಾವ್ ಮೆಂಜಿ ಅತಿಥಿ ಗಣ್ಯರನ್ನು ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಡಾ. ಸುದರ್ಶನ ಎ. ವಂದಿಸಿದರು. ವಂದಿಸಿದರು.
ಸೂಕ್ಷ್ಮಜೀವಶಾಸ್ತ್ರ ವಿಭಾಗ ಐವತ್ತು ವರ್ಷಗಳ ಪೂರೈಸಿ ಸುವರ್ಣ ಮಹೋತ್ಸವ ಮತ್ತು ರಾಷ್ಟ್ರೀಯ ಸಮ್ಮೇಳನದ ಯಶಸ್ವಿಯಾಗಿ ಜರುಗಿತು. ದೇಶದ ವಿವಿಧ ಭಾಗಗಳಿಂದ ಖ್ಯಾತ ವಿಜ್ಞಾನಿಗಳು ಸಂಶೋಧಕರ ಮೌಖಿಕ ಮತ್ತು ಪೋಸ್ಟರ್ ಪ್ರಬಂಧ ಮಂಡಿಸಿ ವಿದ್ವಾಂಸರ ಮೆಚ್ಚುಗೆ ಪಡೆದರು. ಸೂಕ್ಷ್ಮಜೀವ ವಿಜ್ಞಾನ ಒಳಗೊಂಡ ಬಹುಶಿಸ್ತೀಯ ವಿಷಯಗಳ ವೈಜ್ಞಾನಿಕ ಚಿಂತನೆ, ಅಡ್ವಾನ್ಸ್ಡ ಟೆಕ್ನಾಲಜಿಗಳ ಬಗ್ಗೆ ಮಾಹಿತಿಗಳು ವಿದ್ಯಾರ್ಥಿಗಳ ಪ್ರಾಯೋಗಿಕ ಜ್ಞಾನ ಅಳವಡಿಕೆಗೆ ಸಾಕ್ಷಿಯಾಯಿತು. ಸಮ್ಮೇಳನದಲ್ಲಿ ಸುಮಾರು 200 ಪ್ರತಿನಿಧಿಗಳು ಭಾಗವಹಿಸಿದ್ದರು. ದೇಶದ ನಾನಾ ರಾಜ್ಯಗಳಿಂದ 20 ವಿಜ್ಞಾನಿಗಳು ಉಪನ್ಯಾಸ ನೀಡಲು ಆಗಮಿಸಿದ್ದರು. 30 ಸಂಶೋಧನಾ ಲೇಖನಗಳು ಸ್ವೀಕೃತಗೊಂಡಿದ್ದವು.

# ಸಮಾಜದ ಸಂಘಟನೆಗೆ ಒತ್ತು : ಕೃಷ್ಣ ರೆಡ್ಡಿ



**ಕಲಬುರಗಿ :ಜೂ.27:** ನಗರದ ರಾಮಂದಿರ ವೃತ್ತದ ಸಮೀಪ ನೂತನವಾಗಿ ಸ್ಥಾಪಿಸಲಾದ ಕಲಬುರಗಿ ಜಿಲ್ಲಾ ರೆಡ್ಡಿ ಸಮಾಜ ಯುವಕರ ಸಂಘದ ಕಚೇರಿಯನ್ನು ಜೆಡಿಎಸ್ ಮುಖಂಡ ಕೃಷ್ಣ ರೆಡ್ಡಿ ಅವರು ರಿಬ್ಬನ್ ಕತ್ತರಿಸುವ ಮೂಲಕ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಸಂಘದ ಕರಪತ್ರಗಳನ್ನು ಬಿಡುಗಡೆ ಮಾಡಲಾಯಿತು.

ಬಳಿಕ ಮಾತನಾಡಿದ ಕೃಷ್ಣ ರೆಡ್ಡಿ, ಸಮಾಜದ ಅಭಿವೃದ್ಧಿಗೆ ಸಂಘಟಿತ ಪ್ರಯತ್ನ ಅಗತ್ಯವಾಗಿದೆ. ಯುವಕರು ಸಮಾಜಮುಖಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಶಿಕ್ಷಣ, ಉದ್ಯೋಗ, ಸಾಮಾಜಿಕ ಸೇವೆ ಹಾಗೂ ಪರಸ್ಪರ ಸಹಕಾರಕ್ಕೆ ಆದ್ಯತೆ ನೀಡಬೇಕು. ಸಮಾಜದ ಏಕತೆ ಮತ್ತು ಸಂಘಟನೆಯೇ ಅಭಿವೃದ್ಧಿಗೆ ಮೂಲಮಂತ್ರವಾಗಿದ್ದು, ಜಿಲ್ಲಾ ರೆಡ್ಡಿ ಸಮಾಜ ಯುವಕರ ಸಂಘವು ಸಮಾಜದ ಹಿತಕ್ಕಾಗಿ ಮಾದರಿ ಕಾರ್ಯಗಳನ್ನು ಕೈಗೊಳ್ಳಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಡಾ. ಎಸ್.ಎಲ್. ಪಾಟೀಲ್, ವಿಶ್ವಕಾಮ ರೆಡ್ಡಿ, ವಿಶಾಲಾಕ್ಷಿ ಕರಡಿ, ಲಕ್ಷ್ಮಿಕಾಂತ್ ಪಲಾರೆಡ್ಡಿ, ಮಹೇಶ್ ಹೊಸೂರಕರ್, ಹನುಮಂತ್ ರೆಡ್ಡಿ ಶೇರಿಕಾರ್, ಜಿ.ಜಿ. ವಣಿಕ್ಯಾಳ, ಮಲ್ಲಪ್ಪ ಜೊತಗಿ, ಚಂದ್ರಶೇಖರ್ ರೆಡ್ಡಿ ಮಲಬಾದ್, ಸಾಹೇಬಣ್ಣ ರೆಡ್ಡಿ ಆಳಂದ್, ಮಲ್ಲ ರೆಡ್ಡಿ ಸಾಹುಕಾರ್, ನಾಗರೆಡ್ಡಿ, ಶಿವು ಹಾಗಾರ ಗುಂಡಗಿ, ಆನಂದ್ ಬಿರಾದಾರ್, ನಾರಾಯಣ ರೆಡ್ಡಿ, ಆನಂದ್ ರೆಡ್ಡಿ, ಮಲ್ಲಿಕಾರ್ಜುನ ಕೊಲ್ಲೂರ, ಸುನಿಲ್ ರೆಡ್ಡಿ ಸೇರಿದಂತೆ ಸಮಾಜದ ಅನೇಕ ಮುಖಂಡರು, ಯುವಕರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮವು ಆತ್ಮೀಯ ವಾತಾವರಣದಲ್ಲಿ ನಡೆಯಿತು. ಸಮಾಜದ ಸಂಘಟನೆ ಹಾಗೂ ಯುವಕರ ಸಬಲೀಕರಣದ ನಿಟ್ಟಿನಲ್ಲಿ ನೂತನ ಕಚೇರಿ ಮಹತ್ವದ ಪಾತ್ರ ವಹಿಸಲಿದೆ ಎಂಬ ವಿಶ್ವಾಸವನ್ನು ಸದಸ್ಯರು ವ್ಯಕ್ತಪಡಿಸಿದರು.

# ಪಶು ವಿವಿಗೆ ಯುವ ಮುಖಂಡ ವಿಜು ಪಾಟೀಲ ಗಾದಗಿ ನೇಮಕ



**ಬೀದರ್:ಜೂ.27:** ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿ ಸದಸ್ಯರಾಗಿ ಇಲ್ಲಿಯ ಯುವ ಮುಖಂಡ ವಿಜಯಕುಮಾರ(ವಿಜು) ಪಾಟೀಲ ಗಾದಗಿ ಅವರನ್ನು ನೇಮಕ ಮಾಡಲಾಗಿದೆ.

ವಿಶ್ವವಿದ್ಯಾಲಯದ ಕುಲಾಧಿಪತಿಯಾದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮುಂದಿನ ಮೂರು ವರ್ಷಗಳ ಅವಧಿಗೆ ಈ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಎಂ.ಎಸ್ಸಿ ಕೃಷಿ ಪದವೀಧರರಾಗಿರುವ ವಿಜಯಕುಮಾರ ಪಾಟೀಲ ಗಾದಗಿ ಅವರು, ಎರಡು ದಶಕಗಳಿಂದ ಶಿಕ್ಷಣ, ಸಹಕಾರ, ಸಾಮಾಜಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ರಾಷ್ಟ್ರೋತ್ಥಾನ ಫೌಂಡೇಷನ್ ಮೂಲಕ ಜನ ಕಲ್ಯಾಣ ಕಾರ್ಯ ಕೈಗೊಳ್ಳುತ್ತಿದ್ದಾರೆ. ಬಿಜೆಪಿಯಲ್ಲೂ ಸಕ್ರಿಯರಾಗಿದ್ದಾರೆ. ಉತ್ತಮ ಸಂಘಟಕರಾಗಿದ್ದು, ಜಿಲ್ಲೆಯಲ್ಲಿ ತಮ್ಮದೇ ಆದ ಯುವ ಪಡೆಯನ್ನು ಹೊಂದಿದ್ದಾರೆ.

ಮೂರು ಅವಧಿಗೆ ಬೀದರ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕರಾಗಿ, ಒಮ್ಮೆ ಗುರುಪಾದಪ್ಪ ನಾಗಮಾರಪಳ್ಳಿ ಮಲ್ಟಿ ಸೂಪರ್ ಸ್ಪೆಷಾಲಿಟಿ ಸಹಕಾರ ಆಸ್ಪತ್ರೆಯ ನಿರ್ದೇಶಕರಾಗಿ, ಬಿಜೆಪಿ ಯುವ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯರಾಗಿ, ಯುವ ಮೋರ್ಚಾ ಬೀದರ್ ಜಿಲ್ಲಾ ಅಧ್ಯಕ್ಷರಾಗಿ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾಗಿದ್ದಾರೆ.

ತಮ್ಮನ್ನು ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿ ಸದಸ್ಯರಾಗಿ ನೇಮಕ ಮಾಡಿರುವುದು ಸಂತಸ ಉಂಟು ಮಾಡಿದೆ ಎಂದು ವಿಜಯಕುಮಾರ ಪಾಟೀಲ ಗಾದಗಿ ಪ್ರತಿಕ್ರಿಯಿಸಿದ್ದಾರೆ.

ವಿವಿಧೆಡೆ ಅಂಗ ಸಂಸ್ಥೆಗಳನ್ನು ಹೊಂದಿರುವ ವಿಶ್ವವಿದ್ಯಾಲಯ, ರಾಜ್ಯದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. ನನ್ನ ಅಧಿಕಾರ ಅವಧಿಯಲ್ಲಿ ವಿಶ್ವವಿದ್ಯಾಲಯದ ಇನ್ನೂ ಹೆಚ್ಚಿನ ಅಭಿವೃದ್ಧಿ, ವಿದ್ಯಾರ್ಥಿಗಳಿಗೆ ಅಧ್ಯಯನ ಹಾಗೂ ರೈತರಿಗೆ ವಿಶ್ವವಿದ್ಯಾಲಯದ ಸಂಶೋಧನೆಗಳ ಲಾಭ ತಲುಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವೆ ಎಂದು ತಿಳಿಸಿದ್ದಾರೆ.

ವಿಜಯಕುಮಾರ ಪಾಟೀಲ ಗಾದಗಿ ಅವರ ನೇಮಕಕ್ಕೆ ಬೀದರ್ ಕೃಷಿ ಪದವೀಧರರ ಸಂಘದ ಪದಾಧಿಕಾರಿಗಳು ಸೇರಿದಂತೆ ಅನೇಕರು ಹರ್ಷ ವ್ಯಕ್ತಪಡಿಸಿ ಅಭಿನಂದನೆ ತಿಳಿಸಿದ್ದಾರೆ.

# ವಿದ್ಯುತ್ ತಗಲಿ ಮಂಗ ಸಾವು



**ಜಮಖಂಡಿ, ಜೂ 27:** ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಗರದಲ್ಲಿ ವಿದ್ಯುತ್ ತಂತಿ ತಗುಲಿ ಮಂಗವೊಂದು ಸ್ಥಳದಲ್ಲೇ ಮೃತಪಟ್ಟ ಘಟನೆ ನಡೆದಿದೆ.

ಘಟನೆಯ ಮಾಹಿತಿ ತಿಳಿದ ಬಳಿಕ ಸಮಾಜ ಸೇವಕ ಪ್ರದೀಪ್ ಮೇಟಗುಡ್ಡ ಮಹಾರಾಜರು, ನ್ಯಾಯವಾದಿ ವಿನೋದ ಬಿರಾದಾರ ಸೇರಿದಂತೆ ಹಲವು ಸಾಮಾಜಿಕ ಕಾರ್ಯಕರ್ತರು ಸ್ಥಳಕ್ಕೆ ಭೇಟಿ ನೀಡಿ, ಮಂಗಕ್ಕೆ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಿ ಗೌರವಪೂರ್ವಕವಾಗಿ ಅಂತ್ಯ ಸಂಸ್ಕಾರ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಾಮಾಜಿಕ ಕಾರ್ಯಕರ್ತರು, ಮಾನವರಷ್ಟೇ ಪ್ರಾಣಿಗಳಿಗೂ ಬದುಕುವ ಹಕ್ಕಿದ್ದು, ಎಲ್ಲರೂ ಪ್ರಾಣಿ–ಪಕ್ಷಿಗಳ ಮೇಲೆ ದಯೆ ಮತ್ತು ಕರುಣೆ ತೋರಿಸಬೇಕು ಎಂದು ಮನವಿ ಮಾಡಿದರು. ವಿದ್ಯುತ್ ತಂತಿಗಳಿಂದ ಇಂತಹ ದುರ್ಘಟನೆಗಳು ಮರುಕಳಿಸದಂತೆ ಸಂಬಂಧಪಟ್ಟ ಇಲಾಖೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

# ಅಮೋಘ ನಗರದಲ್ಲಿ 40 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಅಲ್ಲಮಪ್ರಭು ಪಾಟೀಲ್ ಚಾಲನೆ



**ಕಲಬುರಗಿ:ಜೂ.27:** ನಗರದ ಉದನೂರ ರಸ್ತೆಯಲ್ಲಿರುವ ಅಮೋಘ ನಗರದಲ್ಲಿ ಮುಖ್ಯಮಂತ್ರಿ ವಿಶೇಷ ಅನುದಾನದ ಅಡಿಯಲ್ಲಿ 40 ಲಕ್ಷ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿರುವ 10ನೇ ವಾರ್ಡಿನ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಗುದ್ದಲಿ ಪೂಜೆ ನೆರವೇರಿಸಿ ಅಧಿಕೃತವಾಗಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಶಾಸಕ ಅಲ್ಲಂಪ್ರಭು ಪಾಟೀಲ್, ನಗರದ ಬಡಾವಣೆಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ರಾಜ್ಯ ಸರ್ಕಾರ ವಿಶೇಷ ಆದ್ಯತೆ ನೀಡುತ್ತಿದೆ. ಗುಣಮಟ್ಟದ ರಸ್ತೆ, ಚರಂಡಿ ಹಾಗೂ ಇತರ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ನಿರಂತರವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಅಮೋಘ ನಗರದ ರಸ್ತೆ ಕಾಮಗಾರಿ ಪೂರ್ಣಗೊಂಡ ಬಳಿಕ ಸ್ಥಳೀಯರ ಸಂಚಾರ ಸುಗಮವಾಗಲಿದ್ದು, ಹಲವು ವರ್ಷಗಳ ಬೇಡಿಕೆ ಈಡೇರಿದಂತಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ದಕ್ಷಿಣ ಮತಕ್ಷೇತ್ರದ ಓಬಿಸಿ ಅಧ್ಯಕ್ಷ ಧರ್ಮರಾಜ್ ಹೇರೂರ, ಪ್ರಥಮ ದರ್ಜೆ ಗುತ್ತಿಗೆದಾರ ಸಂಜಯ್ ಆರ್.ಕೆ., ಎ ಇ ಶಾಂತಕುಮಾರ್ ನಂದೂರ್, ಅಮೋಘ ನಗರ ಅಭಿವೃದ್ಧಿ ಸಂಘದ ಗೌರವಾಧ್ಯಕ್ಷ ಭರಮಶೆಟ್ಟಿ ಜಗಶೆಟ್ಟಿ, ಅಧ್ಯಕ್ಷ ಗುರುರಾಜ್ ಶಂಕರ ಕುಲಕರ್ಣಿ, ಹನುಮಂತರಾವ್ ಪಾಟೀಲ್ ಕಪ್ನೂರ, ಮುದುಕಪ್ಪ (ನ್ಯಾಯವಾದಿ), ಶಿವಯೋಗಿ, ಆಕಾಶ್ ಜೋಶಿ, ವಿನಾಯಕ ಕುಲಕರ್ಣಿ, ವೆಂಕಟೇಶ್ ದೇಶಪಾಂಡೆ, ಸಿದ್ದಣ್ಣ ಅಲ್ಮಲ್ಕರ್, ಶಿಮಜಿ ದೇವ್ಕರ್, ವನಿತಾ ಜಾದವ್, ಗೋಪಾಲ್ ಭಟ್, ರೇಣುಕಾ ಮೈದರ್ಗಿ, ಉಮೇಶ್ ಗದ್ವಾಲ್, ಬಿಸಣ್ಣ ಗದ್ವಾಲ್, ಶಾರದಾ ಓಗಿ, ಮಹೇಶ್ ಕುಲಕರ್ಣಿ, ಶ್ರೀಕಾಂತ ಬಿರಾದಾರ್, ಸರಸ್ವತಿ ಠಾಕೂರ್, ಉಷಾ ಚವಾಣ್, ಸಿದ್ದಲಿಂಗ ಚಿಂಚೋಳಿ, ಮಹೇಶ್ ಕುಮಾರ್ ಜೋಶಿ, ಗುರು ಶಾಂತಪ್ಪ ಮಾವನೂರ, ಶ್ರೀನಿವಾಸ್ ಗುಡಿದೂರ್, ಶಿವಮೂರ್ತಿ ಬಡಿಗೇರ್, ಬಸಪ್ಪ ಮನಿ, ಬಸವರಾಜ ಮರತೂರ, ಕೃಷ್ಣ ಸಿಂಧೆ, ಸಂಗಯ್ಯ ಸ್ವಾಮಿ, ವಿದ್ಯಾಸಾಗರ, ಶಾಂತು ಪಾಟೀಲ್, ಶಿವಾನಂದ್ ಸೇರಿದಂತೆ ಬಡಾವಣೆಯ ಅನೇಕ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಪ್ರಗತಿ ಸಾಧಿಸದ ಪಿಡಿಒಗಳಿಗೆ ನೋಟಿಸ್, ಸಾರ್ವಜನಿಕರ ಕರೆಗಳಿಗೆ ಕಡ್ಡಾಯ ಸ್ಪಂದನೆ ಜಿಪಂ ಸಿಇಒ ಖಡಕ್ ಸೂಚನೆ



**ಆಳಂದ:ಜೂ.27:** ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಕಾರ್ಯಗಳಲ್ಲಿ ವೇಗ ಹೆಚ್ಚಿಸುವುದು, ಸರ್ಕಾರದ ವಿವಿಧ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡುವುದಕ್ಕೆ ಆದ್ಯತೆ ನೀಡುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ರಾಹುಕ್ ಶಂಕನೂರ ಅವರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಾಲೂಕಿನ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕ್ಲರ್ಕ್–ಕಂ–ಡಾಟಾ ಎಂಟ್ರಿ ಆಪರೇಟರ್‌ಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಅವರು ಮಾತನಾಡಿದರು.

ಸಭೆಯಲ್ಲಿ ಕುಡಿಯುವ ನೀರಿನ ನಿಯಮಿತ ಗುಣಮಟ್ಟ ಪರೀಕ್ಷೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಅಡಿಯಲ್ಲಿ ಮಾನವ ದಿನಗಳ ಸೃಜನೆ, ಇ–ಕೆವೈಸಿ ಪ್ರಗತಿ, ಸಾಮಗ್ರಿ ಮೊತ್ತಕ್ಕೆ ಇ–ಎಸ್‌ಎಂಎಸ್ ಸೃಜನೆ, ತೆರಿಗೆ ವಸೂಲಾತಿ, ಸ್ವಚ್ಛ ಭಾರತ ಮಿಷನ್ ಯೋಜನೆ ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೇತನ ಪಾವತಿ ಸೇರಿದಂತೆ ವಿವಿಧ ವಿಷಯಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿ ಮಾಹಿತಿ ಕಲೆಹಾಕಿದರು.

ಪ್ರತಿ ಗ್ರಾಮ ಪಂಚಾಯಿತಿಯ ಪ್ರಗತಿ ವರದಿಯನ್ನು ಅವಲೋಕಿಸಿದ ಸಿಇಒ ಅವರು, ನಿಗದಿತ ಗುರಿಗಳನ್ನು ತಲುಪಲು ಎಲ್ಲಾ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ವಿಶೇಷವಾಗಿ ನರೇಗಾ ಯೋಜನೆಯಡಿ ಹೆಚ್ಚಿನ ಮಾನವ ದಿನಗಳನ್ನು ಸೃಜಿಸುವ ಮೂಲಕ ಗ್ರಾಮೀಣ ಜನರಿಗೆ ಉದ್ಯೋಗಾವಕಾಶ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಊರಿನ ಗುಣಮಟ್ಟದ ಮೇಲ್ವಿಚಾರಣೆ ನಡೆಸುವುದು ಹಾಗೂ ಸ್ವಚ್ಛ ಭಾರತ ಮಿಷನ್ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೇತನ ಪಾವತಿ ಸಂಬಂಧ ಯಾವುದೇ ವಿಳಂಬ ಉಂಟಾಗದಂತೆ ನೋಡಿಕೊಳ್ಳಬೇಕೆಂದು ತಿಳಿಸಲಾಯಿತು.

ಸಭೆಯಲ್ಲಿ ಸಾರ್ವಜನಿಕರ ಸಮಸ್ಯೆಗಳ ಕುರಿತು ವಿಶೇಷ ಗಮನ ಹರಿಸಿದ ಸಿಇಒ ಅವರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತಮ್ಮ ಮೊಬೈಲ್ ಫೋಗಳನ್ನು ಸ್ವಿಚ್ ಆಫ್ ಮಾಡದೆ ಸಾರ್ವಜನಿಕರ ಕರೆಗಳಿಗೆ ಸ್ಪಂದಿಸಬೇಕು. ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ ಪರಿಹಾರ ಕಲ್ಪಿಸುವುದು ಅಧಿಕಾರಿಗಳ ಜವಾಬ್ದಾರಿ ಎಂದು ಹೇಳಿದರು.

ಇದಲ್ಲದೆ, ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸದ ಹಾಗೂ ಸಭೆಗೆ ಗೈರುಹಾಜರಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಕಾರಣ ಕೇಳುವ ನೋಟಿಸ್ ಜಾರಿ ಮಾಡುವಂತೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪ್ರತಿ ಬುಧವಾರ ತಾಲೂಕು ಪಂಚಾಯಿತಿಯಲ್ಲಿ ಪ್ರಗತಿ ಪರಿಶೀಲನೆ ನಡೆಸಿ ಗುರಿ ಸಾಧನೆಗೆ ಕ್ರಮ ಕೈಗೊಳ್ಳುವಂತೆಯೂ ನಿರ್ದೇಶನ ನೀಡಿದರು.

ಸಭೆಯಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಾನಪ್ಪ ಕಟ್ಟಿಮನಿ, ಜಿಲ್ಲಾ ಪಂಚಾಯಿತಿ ಎಇಇ ಸಂಗಮೇಶ, ಗ್ರಾಮೀಣ ಉದ್ಯೋಗ ಯೋಜನೆಯ ಸಹಾಯಕ ನಿರ್ದೇಶಕರು, ಪಂಚಾಯತ್ ರಾಜ್ ಇಲಾಖೆಯ ಸಹಾಯಕ ನಿರ್ದೇಶಕರು, ವ್ಯವಸ್ಥಾಪಕರು, ತಾಲೂಕಿನ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ನರೇಗಾ ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು ಹಾಗೂ ಡಾಟಾ ಎಂಟ್ರಿ ಆಪರೇಟರ್‌ಗಳು ಉಪಸ್ಥಿತರಿದ್ದರು.

# ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ವಸೂಲಾತಿ ಪ್ರಮಾಣ ಹೆಚ್ಚಿಸುವುದು, ಕುಡಿಯುವ


**ಚಿಂಚೋಳಿ: ಜೂ.27:**ತಾಲೂಕಿನಾದ್ಯಂತ ಮುಸ್ಲಿಂ ಬಾಂಧವರು ಹಾಗೂ ಹಿಂದೂ ಸೋದರರು ಒಗೂಡಿ ಭಾವೈಕ್ಯತೆಯ ಸಂಕೇತವಾಗಿ ಮೊಹರಂ (ಪೀರ ಹಬ್ಬ) ಹಬ್ಬವನ್ನು ಅತ್ಯಂತ ಶ್ರದ್ಧಾಭಕ್ತಿ ಹಾಗೂ ಸಡಗರ–ಸಂಭ್ರಮದಿಂದ ಆಚರಿಸಿದರು.ತಾಲೂಕಿನ ನಗರ ಪ್ರದೇಶ ಸೇರಿದಂತೆ ಗ್ರಾಮೀಣ ಭಾಗಗಳಾದ ಐನಾಪುರ, ಕರಕಮುಕಲಿ, ಕುಂಚಾವರಂ, ಸುಲೇಪೇಟ್, ಕೊಡ್ಲಿ, ನಿಡಗುಂದ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮೊಹರಂ ನಿಮಿತ್ತ ಸ್ಥಾಪಿಸಲಾಗಿದ್ದ ಪೀರ ದೇವರಿಗೆ ಸಾರ್ವಜನಿಕರು ವಿಶೇಷ ಪೂಜೆ, ನೈವೇದ್ಯ ಹಾಗೂ ಧೂಪ–ದೀಪಗಳನ್ನು ಬೆಳಗಿ ಭಕ್ತಿ ಸಮರ್ಪಿಸಿದರು ಚಿಂಚೋಳಿ ತಾಲೂಕಿನ ಮೊಹರಂ ಹಬ್ಬದ ವಿಶೇಷತೆಯೆಂದರೆ ಇಲ್ಲಿ ಮುಸ್ಲಿಂ ಬಾಂಧವರಿಗಿಂತಲೂ ಹೆಚ್ಚಾಗಿ ಹಿಂದೂ ಧರ್ಮದವರು ಪೀರ ದೇವರಿಗೆ ಹರಕೆ ಹೊತ್ತು, ಭಕ್ತಿಯಿಂದ ನಡೆದುಕೊಳ್ಳುವುದು ಜಾತಿ, ಮತ, ಬೇಧ–ಭಾವ ಮರೆತು ಎಲ್ಲರೂ ಒಂದಾಗಿ ಆಚರಿಸುವ ಮೂಲಕ ತಾಲೂಕಿನಲ್ಲಿ ಸೌಹಾರ್ದತೆಯ ವಾತಾವರಣ ಮನೆಮಾಡಿತ್ತು

ಹಬ್ಬದ ಅಂಗವಾಗಿ ರಾತ್ರಿ ಜಾಗರಣೆ ನಡೆಸಿ, ಕೆಂಡದ ಹೊಂಡದ (ಆಲಾವಿ) ಸುತ್ತಲೂ ಯುವಕರು ಮತ್ತು ಹಿರಿಯರು ಡೋಲಿನ ನಾದಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ 'ಹುಸೇನ್ ದೂಲಾ ಎಂದು ಜಯಘೋಷ ಕೂಗುತ್ತಾ ಆಲಾವಿ ಕುಣಿತ ಪ್ರದರ್ಶಿಸಿದ್ದು ನೆರೆದಿದ್ದ ಸಾರ್ವಜನಿಕರ ಗಮನ ಸೆಳೆಯಿತು ಹಬ್ಬದ ಕೊನೆಯ ದಿನವಾದ ಇಂದು ಸಂಜೆ ಸಕಲ ವಾದ್ಯ–ಮೇಳಗಳೊಂದಿಗೆ ಪೀರ ದೇವಸ್ಥಾನಗಳಿಂದ ಮೂರ್ತಿಗಳನ್ನು ಭವ್ಯ ಮೆರವಣಿಗೆಯ ಮೂಲಕ ತಾಲೂಕಿನ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ,



ನಂತರ ಹತ್ತಿರದ ಜಲಮೂಲಗಳಲ್ಲಿ (ಬಾವಿ ಅಥವಾ ಕೆರೆಗಳಲ್ಲಿ) ವಿಸರ್ಜನೆ ಮಾಡುವುದರೊಂದಿಗೆ ಮೊಹರಂ ಹಬ್ಬಕ್ಕೆ ತೆರೆ ಬಿಡಲಾಯಿತು ತಾಲೂಕಿನಾದ್ಯಂತ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲಿಸ್ ಇಲಾಖೆ ಸಿಪಾಯಿಗಳಾದ ಕಪಿಲದೇವ ಮತ್ತು ಪಿಎಸ್ಐ ಗಂಗಮ್ಮ ಅವರ ನೇತೃತ್ವದಲ್ಲಿ ಬಿಗಿ ಪೊಲಿಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು ಈ ಸಂಧರ್ಭದಲ್ಲಿ ಬಡಿದರ್ಗಾದ ಸಜ್ಜದೆ ನಶೀನ್ ಸೈಯದ್ ಶಾಹ ಅಕ್ಬರ್ ಹುಸ್ಸೈನಿ,ಹಿರಿಯ ಮುಖಂಡ ಕೆ ಎಂ ಬಾರಿ, ಗೋಪಾಲರಾವ ಕಟೀಮನಿ, ಗೌತಮ್ ಪಾಟೀಲ್, ಎಸ್ ಕೆ ಮುತ್ತಾರ್,ಮೊಖದುಮ್ ಖಾನ್, ಮಂಜಲೆ, ಅಬದುಲ ಹಾದಿ, ಬಸವರಾಜ ವಾಡಿ, ಶ್ರೀಕಾಂತ್ ಭೋವಿ, ಸಲೀಮ್ ಸೌಧಗರ, ನರಸಪ್ಪ, ಅಯೂಬ್ ಖಾನ್, ಹಾಸನ ಹಾಶ್ಮಿ, ಸೇರಿದಂತೆ ತಾಲೂಕಿನ ಸುತ್ತಮುತ್ತ ಹಳ್ಳಿಯ ಭಕ್ತರು ಸಾವಿರಾರು ಜನಸಂಖ್ಯೆಯಲ್ಲಿ ಸಾಕ್ಷಿಯಾದರು

# ದೇವತೆ ಮೂರ್ತಿ ಪ್ರತ್ಯಕ್ಷ, ಎ.ದಿಬ್ಬದಹಳ್ಳಿ ಗ್ರಾಮಸ್ಥರಲ್ಲಿ ಹುಟ್ಟಿದ ಭಯ, ಆತಂಕ.



**ಕೂಡ್ಲಿಗಿ. ಜೂ. 27 :–** ಬೇವಿನಹಳ್ಳಿ ದುರುಗಮ್ಮ, ಮಾರೆಮ್ಮದೇವತೆಗಳನ್ನು ಹೋಲುವಂತಹ ದೇವತೆಯ ಮೂರ್ತಿಯೊಂದು ತಾಲೂಕಿನ ಎ. ದಿಬ್ಬದಹಳ್ಳಿ ಸಮೀಪದ 1 ಕಿಮೀ ದೂರದ ಅಡವಿಯಲ್ಲಿ ದಾರಿಹೋಕರಿಗೆ ಶುಕ್ರವಾರ ಬೆಳಗಿನ ಜಾವ ಪ್ರತ್ಯಕ್ಷವಾಗಿದ್ದು ದೇವತೆಯ ಮೂರ್ತಿಯನ್ನು ಕಂಡ ಗ್ರಾಮದ ಜನತೆಯಲ್ಲಿ ಭಯ ಆತಂಕ ಉಂಟಾಗಿದೆ ಎಂದು ತಿಳಿದಿದೆ.

ಹೌದು ಶುಕ್ರವಾರ ಅಂದರೆ ನಿನ್ನೆ ಬೆಳಿಗ್ಗೆ 5ಗಂಟೆ ಸುಮಾರಿಗೆ ದಿಬ್ಬದಹಳ್ಳಿ ಗ್ರಾಮದ ಮನೆಯಲ್ಲಿ ಕಾರೆವು ಇರುವುದರಿಂದ ಕೂಡ್ಲಿಗಿ ಸಂತೆಗೆ ತರಕಾರಿ ತರಲು ಗ್ರಾಮದಿಂದ ಒಂದಿಬ್ಬರು ಬೈಕಿನಲ್ಲಿ ಹೋಗುವಾಗ ಒಂದು ಕಿಲೋಮೀಟರ್ ದೂರದಲ್ಲಿರುವ ಅಡವಿಯಲ್ಲಿ ಏಕಾಏಕಿ ಲೈಟ್ ಬೆಳಕಿಗೆ ದೇವರ ಮೂರ್ತಿ ಕಂಡು ಭಯಪಟ್ಟು ಗ್ರಾಮದ ಜನರಿಗೆ ಸುದ್ದಿ ಮುಟ್ಟಿಸಿದ್ದಾರೆ ಗ್ರಾಮದ ಜನರು ಬೆಳಿಗ್ಗೆಯಿಂದಲೇ ಅಡವಿಯತ್ತ ಧಾವಿಸಿ ಅದರ ಫೋಟೋ ತೆಗೆದು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ ಆದರೆ ಆ ಮೂರ್ತಿ ಸಮೀಪ ಹೋಗುವಲ್ಲಿ ಅಲ್ಲಿರುವ ಲಿಂಬೆಹಣ್ಣು ದೇವರಿಗೆ ಹಾಕಿದ ಹೂವಿನಹಾರ ತಾಜವಾಗಿವೆ ಕುಂಬಳಕಾಯಿ ಹೊಡೆದು ಪೂಜೆ ಮಾಡಿದ್ದಾರೆ ಅಲ್ಲದೆ ದೇವರ ಮೂರ್ತಿ ಇಟ್ಟ ಸ್ಥಳವನ್ನು ಗಿಡಗಂಟಿಯಿಂದ ಬಯಲು ಮಾಡಿದ್ದಾರೆ ದೇವರಮೂರ್ತಿ ಲಕಲಕ ಎಂದು ಹೊಳೆಯುತ್ತಿದೆ ಎಂದು ಗ್ರಾಮದ ತಿಪ್ಪೇಸ್ವಾಮಿ ಹಾಗೂ ಇತರರು ತಿಳಿಸುತ್ತಿದ್ದೂ ಜನರಲ್ಲಿ ಈ ಮೂರ್ತಿ ಯಾರು ತಂದಿದ್ದಾರೆ ಯಾಕೆ ತಂದಿದ್ದಾರೆ ಇಲ್ಲಿ ಯಾಕೆ ಬಿಟ್ಟು ಹೋಗಿದ್ದಾರೆ ಎನ್ನುವ ಹತ್ತು ಹಲವಾರು ಪ್ರಶ್ನೆಗಳು ಗ್ರಾಮದ ಜನರ ಬಾಯಲ್ಲಿ ಹರಿದಾಡುತ್ತಿವೆ ಇನ್ನೂ ಕೆಲವರು ಆ ದೇವರ ಮೂರ್ತಿಯನ್ನು ಇಟ್ಟಿರುವ ಸ್ಥಳದಲ್ಲೇ ಪ್ರತಿಷ್ಠಾಪನೆ ಮಾಡುವ ಉದ್ದೇಶದಿಂದ ಅಲ್ಲಿ ಇಟ್ಟಿರಬಹುದು ಎಂದು ಮಾತನಾಡುತ್ತಿದ್ದಾರೆ. ಆದರೆ ದಿಬ್ಬದಹಳ್ಳಿ ಜನರು ಮಾತ್ರ ಇಂದು ಬೆಳಿಗ್ಗೆಯಿಂದ ಮೂರ್ತಿ ಪ್ರತ್ಯಕ್ಷ ಕಂಡಾಗಿನಿಂದ ಆತಂಕ, ಭಯದ ವಾತಾವರಣದಲ್ಲಿರುವುದಂತೂ ಸತ್ಯ ಎನ್ನುತ್ತಿದ್ದಾರೆ.

# ಹಿಂದೂ ಮುಸ್ಲಿಂ ಭಾವೈಕ್ಯತೆಯ ಸಂಕೇತವಾದ ಮೊಹರಂ ಹಬ್ಬ



**ಕೊಟ್ಟೂರು: ಜೂನ್ 27:** ಸೌಹಾರ್ದತೆ ಮತ್ತು ಧಾರ್ಮಿಕ ಸಹಿಷ್ಣುತೆಗೆ ಹೆಸರಾಗಿರುವ ಐತಿಹಾಸಿಕ ಕೊಟ್ಟೂರು ಪಟ್ಟಣ ಹಾಗೂ ದೂಪದಹಳ್ಳಿ ಭಾಗದಲ್ಲಿ ಜಗತ್ತಿಗೆ ಶಾಂತಿ ಮತ್ತು ತ್ಯಾಗದ ಸಂಕೇತವಾದ ಹಜರತ್ ಇಮಾಮ್ ಹುಸೇನ್ ಅವರ ಸ್ಮರಣಾರ್ಥ ಮೊಹರಂ ಹಬ್ಬವನ್ನು ಅತ್ಯಂತ ಶ್ರದ್ಧಾಭಕ್ತಿ ಹಾಗೂ ವಿಜೃಂಭಣೆಯಿಂದ ಆಚರಿಸಲಾಯಿತು. ಜಾತಿ ಮತ ಭೇದ ಭಾವ ಇಲ್ಲದೆ ಹಿಂದೂ ಮತ್ತು ಮುಸ್ಲಿಂ ಬಾಂಧವರು ಒಟ್ಟಾಗಿ ಆಚರಿಸುವ ಹಬ್ಬವು ಈ ಭಾಗದಲ್ಲಿ ಕೋಮು ಸೌಹಾರ್ದತೆಗೆ ಹಿಡಿದ ಕೈಗನ್ನಡಿಯಾಗಿದೆ ಕೊಟ್ಟೂರು ತಾಲೂಕಿನ ದೂಪದಹಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಹತ್ತು ದಿನಗಳ ಕಾಲ ನಡೆಯುವ ಈ ಆಚರಣೆಯು ಮೊದಲ ದಿನದಂದು ಸಾಂಪ್ರದಾಯಿಕವಾಗಿ ಗುದ್ದಲಿ ಪೂಜೆ ನೆರವೇರಿಸಿ ಅಶುರ್ಕಾನಗಳಲ್ಲಿ ಹಸೇನಿ ಮತ್ತು ಹುಸೇನಿ ದೇವರನ್ನು ಕೂರಿಸುವ ಮೂಲಕ ಅಧಿಕೃತವಾಗಿ ಚಾಲನೆ ದೊರೆಯುತ್ತದೆ ಹಬ್ಬದ ದಿನಗಳಲ್ಲಿ ಊರಿನ ಎಲ್ಲರೂ ದರ್ಗಾ ಮತ್ತು ಪೀರ್ಲಮಸೀದಿಗಳಿಗೆ ಭೇಟಿ ನೀಡಿ ಕೊಬ್ಬರಿ ಸಕ್ಕರೆ ನೈವೇದ್ಯ ಅರ್ಪಿಸಿ ತಮ್ಮ ಹರಕೆಗಳನ್ನು ತೀರಿಸುತ್ತಾರೆ ಜಾನಪದ ಕಲೆಯ ಸೊಗಡು ಅಲಾಯಿ ಹೆಜ್ಜೆ ಕುಣಿತ ಮೊಹರಂ ಹಬ್ಬದ ವಿಶೇಷತೆ ಈ ಹಬ್ಬವು ಕೇವಲ ಧಾರ್ಮಿಕ ಆಚರಣೆಯನ್ನು ಅಷ್ಟೇ ಅಲ್ಲದೆ ಜಾನಪದ ಕಲೆಗಳ ವೈಭವಕ್ಕೂ ಸಾಕ್ಷಿಯಾಗಿದೆ ಹಲಗೆಯ ನಾದಕ್ಕೆ ತಕ್ಕಂತೆ ಯುವಕರು ಮತ್ತು ಹಿರಿಯರು ಹೆಜ್ಜೆ ಹಾಕುವ ಅಲಾಹಿ ಕುಣಿತವು ನೋಡುಗರ ಕಣ್ಣುಗಳನ್ನು ಸೆಳೆಯುತ್ತವೆ ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಶೈಲಿಯ ವಿಶಿಷ್ಟ ಮೊಹರಂ ಪದಗಳು ( ರಿಲಯತ್ ಪದಗಳು) ರಾತ್ರಿ ಇಡಿ ಮೊಳಗುತ್ತವೆ.

ಕತ್ತಲ ರಾತ್ರಿ ಮತ್ತು ಅಗ್ನಿಹಾಯುವ ಕಾರ್ಯಕ್ರಮ: ಹಬ್ಬದ ಪ್ರಮುಖ ಆಕರ್ಷಣೆಯಾದ 9ನೇ ದಿನದ ಕತ್ತಲರಾತ್ರಿಯಂದು ಇಡೀ ಊರು ತಳಿರು ತೋರಣಗಳಿಂದ ಸಿಂಗಾರಗೊಂಡು ಜಾಗರಣೆ ಮಾಡುತ್ತದೆ ಹತ್ತನೇ ದಿನದ ಮುಂಜಾನೆ ಅಶೋರ್ ಕಾನಗಳ ಮುಂದೆ ಆಳವಾಗಿ ತೋಡಿರುವ ಕೆಂಡದ ಕುಂಡದಲ್ಲಿ ಭಕ್ತರು ಬೋಲೋ ಬೋಲೋ ಯಾ ಹುಸೇನ್ ಎನ್ನುತ್ತಾ ಭಕ್ತಿ ಭಾವದಿಂದ ಅಗ್ನಿಹಾದು ತಮ್ಮ ಭಕ್ತಿ ಭಾವಗಳನ್ನು ಹರಕೆಗಳನ್ನು ತೀರಿಸಿಕೊಳ್ಳುವುದು ನೋಡಿದರೆ ಭಕ್ತರಲ್ಲಿ ರೋಮಾಂಚನವಾಗುತ್ತದೆ ಸಣ್ಣ ಮಕ್ಕಳನ್ನು ಪೀರ್ ದೇವರಿಗೆ ಮುಟ್ಟಿಸಿ ಆಶೀರ್ವಾದ ಪಡೆಯುವ ದೃಶ್ಯಗಳು ಇಲ್ಲಿನ ಕೋಮು ಸೌಹಾರ್ದತೆಯ ಪ್ರತೀಕವಾಗಿರುತ್ತದೆ. ದೂಪದಹಳ್ಳಿ ಗ್ರಾಮದಲ್ಲಿ ಬಹುಬಾಗ ಹಿಂದೂ ಧರ್ಮದ ಜನರೇ ಮುಂದೆ ನಿಂತು ಈ ಹಬ್ಬವನ್ನು ಆಚರಿಸುತ್ತಾರೆ ಹಿರಿಯರಿಂದಲೂ ನಡೆದುಕೊಂಡು ಬಂದ ಈ ಸಂಪ್ರದಾಯವನ್ನು ಎಲ್ಲರೂ ಮುಂದೆ ನಿಂತು ಹಬ್ಬ ಮಾಡುವುದು ತಮ್ಮ ಹಿರಿಯರ ಕಾಲದಿಂದಲೂ ನಡೆದುಕೊಂಡು ಬಂದಿದ್ದು ಈಗಲೂ ಎಲ್ಲರೂ ಸಂಭ್ರಮದಿಂದ ಸೌಹಾರ್ದತೆಯಿಂದ ಆಚರಿಸುತ್ತೇವೆ ಎಂದು ಗ್ರಾಮದ ಬಣಕಾರ ಪ್ರಕಾಶ್ ರವರು ಸಂಭ್ರಮದಿಂದ ತಮ್ಮ ಅಭಿಪ್ರಾಯವನ್ನು ಪತ್ರಿಕೆಯೊಂದಿಗೆ ಹಂಚಿಕೊಂಡರು ಇದರಿಂದ ಎಲ್ಲರಿಗೂ ಸಹೋದರತ್ವ ಭಾವನೆಯನ್ನು ಮೂಡಿಸುತ್ತದೆ ಕೊನೆಯ ದಿನದಂದು ಪೀರ್ಲ ದೇವರನ್ನು ಸಾರ್ವಜನಿಕವಾಗಿ ಭವ್ಯ ಮೆರವಣಿಗೆಯ ಮೂಲಕ ಕರೆದೊಯ್ದು ಬೀಳ್ಕೊಡುವ ಮೂಲಕ 10 ದಿನಗಳ ಹಬ್ಬಕ್ಕೆ ತೆರೆ ಬೀಳುತ್ತದೆ

# ಭೀಕರ ಅಪಘಾತ: ಐವರ ಸಾವು

**ಕೊಪ್ಪಳ,ಜೂ. 27**–ಮಂತ್ರಾಲಯಕ್ಕೆ ಹೋಗುತ್ತಿದ್ದ ಮಾರುತಿ ಓಮಿನಿ ವ್ಯಾನ್ ಗೆ ಏಕಾಏಕಿ ರಸ್ತೆ ವಿಭಜಕ ದಾಟಿ ಬಂದು ಎದುರಿನಿಂದ ಬಂದ ಲಾರಿ ಡಿಕ್ಕಿ ಹೊಡೆದು ಐವರು ಮೃತಪಟ್ಟಿರುವ ದುರ್ಘಟನೆ ಕುಕನೂರು ತಾಲೂಕಿನ ಭಾನಾಪೂರ ಬಳಿಯ ರಾಷ್ಟ್ರೀಯ ಹೆದ್ದಾರಿ 63 ರಲ್ಲಿ ಇಂದು ಮುಂಜಾನೆ ಸಂಭವಿಸಿದೆ.

ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲೂಕಿನ ಕಬ್ಬಾರ್ ಗ್ರಾಮದ ಬಾಳೆಕಾಯಿ (35), ಅಮೃತಾ ಕೋಟ್ಯಾಳ್ (25) ಹಾಗೂ ರಮೇಶ್ ಬಳ್ಳಾರಿ (45) ಸ್ಥಳದಲ್ಲಿಯೇ ಮೃತಪಟ್ಟರೆ, ಪ್ರವೀಣ್ ಬಾಳೆಕಾಯಿ(40) ಹಾಗೂ ಚಿಕಿತ್ಸೆ ಫಲಿಸದೆ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ.

ಮೃತ ನಾಲ್ವರು ಸೇರಿ 6 ಮಂದಿ ಓಮಿನಿ ವ್ಯಾನ್ ನಲ್ಲಿ ಮುಂಜಾನೆ ಮಂತ್ರಾಲಯಕ್ಕೆ ಹೋಗುವಾಗ ಮಾರ್ಗ ಮಧ್ಯದ ಭಾನಾಪೂರ ಬಳಿಯ ರಾಷ್ಟ್ರೀಯ ಹೆದ್ದಾರಿ 63 ರಲ್ಲಿ ಪಕ್ಕದ ರಸ್ತೆಯಲ್ಲಿ ಚಲಿಸುತ್ತಿದ್ದ ಅಶೋಕ್ ಲೇಲ್ಯಾಂಡ್ ವಾಹನವೊಂದು ನಿಯಂತ್ರಣ ತಪ್ಪಿ, ಏಕಾಏಕಿ ಡಿವೈಡರ್ ದಾಟಿ ಬಂದು ಎದುರಿನಿಂದ ಬರುತ್ತಿದ್ದ ಓಮಿನಿ ಕಾರಿಗೆ ಡಿಕ್ಕಿ ಹೊಡೆದು ಈ ದುರ್ಘಟನೆ ಸಂಭವಿಸಿದೆ.

ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿರುವ 6 ಮಂದಿಯನ್ನು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಈ ಪೈಕಿ ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ



ಎಂದು ಪೊಲೀಸರು ತಿಳಿಸಿದ್ದಾರೆ.

ಘಟನಾ ಸ್ಥಳಕ್ಕೆ ಕುಕನೂರು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

# ಪಶು ವೈದ್ಯಕೀಯ ಮಹಾವಿದ್ಯಾಲಯದ ಬಾಕಿ ಕಾಮಗಾರಿ ಬೇಗ ಪೂರ್ಣಗೊಳಿಸಿ : ಶಾಸಕ ಲಕ್ಷ್ಮಣ ಸವದಿ

**ಅಥಣಿ: ಜೂ.27:**ತಾಲೂಕಿನ ಕೊಕಟನೂರ ಗ್ರಾಮದಲ್ಲಿರುವ ಬಾವುರಾವ್ ದೇಶಪಾಂಡೆ ಪಶು ವೈದ್ಯಕೀಯ ಮಹಾವಿದ್ಯಾಲಯದ ಬಾಕಿ ಉಳಿದ ಬೋಧಕರ ಕೊಠಡಿ. ವಿದ್ಯಾರ್ಥಿಗಳ ಹಾಸ್ಟೇಲ್, ಶಿಕ್ಷಕರ ವಸತಿ ನಿಲಯಗಳು, ಬೀದಿ ದೀಪ, ನೀರಿನ ವ್ಯವಸ್ಥೆ, ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರಿನ ಕಾಮಗಾರಿಗಳನ್ನು ಶೀಘ್ರದಲ್ಲೇ ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಶಾಸಕ ಲಕ್ಷ್ಮಣ ಸವದಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ತಾಲೂಕಿನ ಕೊಕಟನೂರು ಗ್ರಾಮದ ಹೊರವಲಯದಲ್ಲಿರುವ ಪಶು ವೈದ್ಯಕೀಯ ಮಹಾವಿದ್ಯಾಲಯದ ಸಭಾ ಭವನದಲ್ಲಿ ಶಾಸಕ ಲಕ್ಷ್ಮಣ ಸವದಿ ಅವರ ಅಧ್ಯಕ್ಷತೆಯಲ್ಲಿ ಮಹಾವಿದ್ಯಾಲಯದ ಕಾಮಗಾರಿ ಪ್ರಗತಿ ಕುರಿತು ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ವಿಶೇಷ ಸಭೆ ನಡೆಸಿ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿ ಕಾಮಗಾರಿ ಪ್ರಗತಿಯ ಬಗ್ಗೆ ಮಾಹಿತಿ ಪಡೆದು ಮಾತನಾಡುತ್ತಿದ್ದರು.

ಅಥಣಿ ಭಾಗದ ರೈತರು ಮತ್ತು ಪಶು ಪಾಲಕರಿಗೆ ಅತ್ಯಾಧುನಿಕ ಪಶು ವೈದ್ಯಕೀಯ ಸೇವೆ ಹಾಗೂ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶದಿಂದ ಸರ್ಕಾರ ಪಶು ವೈದ್ಯಕೀಯ ಮಹಾವಿದ್ಯಾಲಯವನ್ನು ಸ್ಥಾಪನೆ ಮಾಡಿದೆ. ಈ ಮಹತ್ವಾಕಾಂಕ್ಷಿ ಯೋಜನೆಯ ಬಾಕಿ ಉಳಿದಿರುವ ಕಾಮಗಾರಿ ಮೂಲಸೌಕರ್ಯ ಅಭಿವೃದ್ಧಿ. ಸುಸಜ್ಜಿತ ಕಟ್ಟಡ ಕಾಮಗಾರಿ ನಿರ್ಮಾಣ ಯಾವುದೇ ಕಾರಣಕ್ಕೂ ವಿಳಂಬವಾಗಬಾರದು. ಕಾಮಗಾರಿಯ ಪ್ರತಿಯೊಂದು ಹಂತವನ್ನು ಗುಣಮಟ್ಟದೊಂದಿಗೆ ಹಾಗೂ ನಿಗದಿತ ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಅಧಿಕಾರಿಗಳು ಕಾಮಗಾರಿಯ ಪ್ರಗತಿ ಕುರಿತು ಮಾಹಿತಿ ನೀಡಿದರು. ಕಟ್ಟಡ ನಿರ್ಮಾಣ, ಮೂಲಸೌಕರ್ಯ ಅಭಿವೃದ್ಧಿ, ಕುಡಿಯುವ ನೀರು, ವಿದ್ಯುತ್



ಹಾಗೂ ರಸ್ತೆ ಸಂಪರ್ಕ ಸೇರಿದಂತೆ ವಿವಿಧ ಕಾಮಗಾರಿಗಳು ವೇಗವಾಗಿ ನಡೆಯುತ್ತಿದ್ದು, ಶೀಘ್ರದಲ್ಲೇ ಪೂರ್ಣಗೊಳ್ಳಲಿವೆ ಎಂದು ಶಾಸಕ ಲಕ್ಷ್ಮಣ ಸವದಿ ತಿಳಿಸಿದರು.

ಈ ವೇಳೆ ತಹಶೀಲ್ದಾರ ಸಿದರಾಯ ಭೋಸಗಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಶಿವಾನಂದ ಕಲ್ಲಾಪೂರ, ಲೋಕೋಪಯೋಗಿ ಇಲಾಖೆಯ ಮಲ್ಲಿಕಾರ್ಜುನ ಮಗದುಮ್, ತೋಟಗಾರಿಕೆ ಇಲಾಖೆಯ ರೇಖಾ ಹಳ್ಳೂರ, ಅರಣ್ಯ ಇಲಾಖೆಯ ಅಧಿಕಾರಿಗಳು ಸೇರಿದಂತೆ ಪಶು ವೈದ್ಯಕೀಯ ಮಹಾವಿದ್ಯಾಯಲದ ಸಿಬ್ಬಂಧಿಗಳು ಉಪಸ್ಥಿತರಿದ್ದರು

# ಖಂಡಿಖೇರಿಯಲ್ಲಿ ಭಕ್ತಿ ಭಾವದಿಂದ ನಡೆದ ಖಾಟು ಶಾಮ್‌ಬಾಬಾ ಭವ್ಯ ಕೀರ್ತನೆ



**ಔರಾದ್ :ಜೂ.27:** ತಾಲೂಕಿನ ಖಂಡಿಖೇರಿ ಗ್ರಾಮದಲ್ಲಿ ಖಾಟು ಶಾಮ್‌ಬಾಬಾ ಅವರ ಭವ್ಯ ಕೀರ್ತನೆ ಕಾರ್ಯಕ್ರಮ ವಿಜೃಂಭಣೆಯಿಂದ, ಭಕ್ತ ಸಾರದ ಮಧ್ಯೆ ಜರುಗಿತು.

ಖಂಡಿಖೇರಿ ಗ್ರಾಮದ ಶ್ಯಾಮ ಭಕ್ತರಾದ ವೆಂಕಟರಾವ ಗಡದೆ, ಶಾಮಲಾಬಾಯಿ ಗಡದೆ, ಜ್ಞಾನೇಶ್ವರ ಗಡದೆ, ಸಚಿನ ಗಡದೆ ಇವರು ಶಾಮ ಬಾಬಾ ಕೀರ್ತನೆಯ ಕಾರ್ಯಕ್ರಮದ ಆಯೋಜನೆ ಮಾಡಿದ್ದರು ಸಾಯಂಕಾಲ 8 ಗಂಟೆಯಿಂದ ಮುಂಜಾನೆಯವರೆಗೆ ಖಾಟು ಶಾಮಬಾಬಾ ಭಕ್ತಿ ಗೀತೆಗಳ ಹಾಗೂ ಕೀರ್ತನೆ ಮಾಡಿದರು.

ಶಾಮ ಬಾಬಾ ಅವರ ಪ್ರತಿಮೆಗೆ ಪೂಜೆ ಮಾಡುವ ಮುಖಾಂತರ ಕೀರ್ತನೆ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಹೈದ್ರಾಬಾದಿನಿಂದ ಬಂದ ಕೀರ್ತನಾಕಾರರಾದ ರೋಹನ್ ಜೋಷಿ ಹಾಗೂ ಸಾಗರ ವ್ಯಾಸ್ ಇವರು ಇಡೀ ರಾತ್ರಿ ಭಜನೆ ಹಾಗೂ ಕೀರ್ತನ ಕಾರ್ಯಕ್ರಮ ನಡೆಸಿಕೊಟ್ಟರು. ನಸುಕಿನಲ್ಲಿ ಆರತಿಯೊದಿಗೆ ಸಮಾರಂಭ ಮುಕ್ತಾಯಗೊಂಡಿತ್ತು. ಈ ಕಾರ್ಯಕ್ರಮದಲ್ಲಿ ಖಂಡಿಖೇರಿ ಗ್ರಾಮದ ಸುತ್ತ ಮುತ್ತಲಿನ ಶಾಮ ಭಕ್ತರು ಹಾಗೂ ಔರಾದ ತಾಲೂಕಿನ ಅನೇಕ ಗ್ರಾಮಗಳಿಂದ ಶಾಮ ಭಕ್ತರು ಶಾಮ ಕೀರ್ತನೆಯಲ್ಲಿ ಪಾಲ್ಗೊಂಡಿದ್ದರು. ಬಂದ ಭಕ್ತರಿಗೆ ವೆಂಕಟರಾವ ಗಡದೆ ಅವರಿಂದ ಮಹಾ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಇಡೀ ರಾತ್ರಿ ಭಕ್ತರು ಶಾಮ ಭಜನೆಯಲ್ಲಿ ತಲೀನರಾಗಿ ಆನಂದಿಸಿದರು. ಇದಲ್ಲದೇ ಶಾಮ ಭಕ್ತರು ಶಾಮ ಭಜನೆಯಲ್ಲಿ ಕುಣಿದು ಕುಪ್ಪಳಿಸಿದರು.

ರಾತ್ರಿವಿಡೀ ಭಕ್ತರು ಶಾಮ ಭಕ್ತಿಯಲ್ಲಿ ತೇಲಾಡಿದರು. ಶಾಮ ಭಜನೆ, ಕೃಷ್ಣ ಭಜನೆ, ಹನುಮಾನ ಭಜನೆ, ರಾಮ ಭಜನೆ, ಭವಾನಿ ಭಜನೆ ಹಾಡಲಾಯಿತು. ಭಕ್ತಿಮಯ ವಾತಾವರಣದಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಈ ಸಂದರ್ಭದಲ್ಲಿ ಖಂಡಿಖೇರಿಯಲ್ಲಿನ ಯಲ್ಲಾಲಿಂಗ ಆಶ್ರಮದ ಪೂಜ್ಯ ಶಿವಪ್ಪಾ ಮಹಾರಾಜರು, ಗುರುನಾಥ ವಡ್ಡೆ ಹಾಗೂ ಗ್ರಾಮದಲ್ಲಿನ ಪ್ರಮುಖರು, ಭಜನೆ ಮಂಡಳಿಗಳು, ಮಹಿಳಾ ಭಜನೆ ಮಂಡಳಿಗಳು ಭಾಗವಹಿಸಿದ್ದರು.

# ಮಳೆಗಾಗಿ ದೇವರ ಮೊರೆ ಹೋದ ಚಿಮ್ಮಾಇದ್ಲಾಯಿ ರೈತರು

**ಚಿಂಚೋಳಿ :ಜೂ.27:**ತಾಲೂಕಿನ ಚಿಮ್ಮಾಇದ್ಲಾಯಿ ಗ್ರಾಮದ ರೈತರು ತಮ್ಮ ಹೊಲದಲ್ಲಿ ಸೋಯ ತೊಗರಿ ಮತ್ತು ಮುಂತಾದ ಬೆಳೆಗಳನ್ನು ತಮ್ಮ ಹೊಲದಲ್ಲಿ ಬಿತ್ತನೆ ಮಾಡಿ 15 ದಿವಸಗಳಾದರೂ ಮಳೆ ಬರದ ಕಾರಣ ಇಂದು ಗ್ರಾಮದ ರೈತರು ಹಾಗೂ ಪರಮ ಪೂಜಾ ವಿಜಯ ಮಾಂತೇಶ್ವರ್ ಸ್ವಾಮೀಜಿಗಳ ಅವರ ನೇತೃತ್ವದಲ್ಲಿ ಗ್ರಾಮದ ಹನುಮಾನ್ ದೇವರ ಬರೆ ಹೋಗಿದ್ದಾರೆ ಇಂದಿನಿಂದ ಏಳು ದಿನದ ಸಪ್ತ ಭಜನೆ ಮಾಡುತ್ತಿದ್ದಾರೆ ಗ್ರಾಮದ ರೈತರು ಹಾಗೂ ಭಜನೆ ಮಂಡಳಿದವರು ಮಳೆಗಾಗಿ ಚಿಮ್ಮಾಇದ್ಲಾಯಿ ಗ್ರಾಮದ ವಿವಿಧ ಭಜನೆ ಮಂಡಳಿಗಳಿಂದ ಭಜನೆಯನ್ನು ಹಮ್ಮಿಕೊಂಡಿದ್ದಾರೆ ಈ ಸಂದರ್ಭದಲ್ಲಿ ಚಿಮ್ಮಾಇದ್ಲಾಯಿ ಗ್ರಾಮದ ಮುಖಂಡರಾದ ಶಿವಶರಣಪ್ಪ ಪೊಲೀಸ್ ಪಾಟೀಲ್, ಶಿವರಾಜ ದೇಶಮುಖ್, ಮಲ್ಲಿಕಾರ್ಜುನ ಬಳಕೇರಿ, ಶಿವಶರಣಪ್ಪ ಡೆಂಗಿ, ಗುಂಡಪ್ಪ ಅವರಾದಿ, ಲಕ್ಷ್ಮಿಕಾಂತ ಕೋಂಟಿ, ಶಿವರಾಜ್ ಚಟನಳ್ಳಿ, ಮತ್ತು ಅನೇಕ ಚಿಮ್ಮಾಇದ್ಲಾಯಿ ಗ್ರಾಮದ ಭಜನೆ ಮಂಡಲ ಸದಸ್ಯರು ಹಾಗೂ ಗ್ರಾಮದ ರೈತರು ಸಪ್ತ ಭಜನೆಯಲ್ಲಿ ಭಾಗಿಯಾಗಿದ್ದರು



**Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.**
**Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE**